ಕಲ್ಯಾಣ ಕರ್ನಾಟಕದ ಪ್ರತಿಬಿಂಬ......

ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

"VARTHA LOKA" Kannada Daily Morning News Paper, VIJAYNAGAR. Dist.: Vijaynagar

ಕನ್ನಡ ದಿನಪತ್ರಿಕೆ

ಕೊಪ್ಪಳ । ರಾಯಚೂರು । ಬಳ್ಳಾರಿ । ವಿಜಯನಗರ । ಯಾದಗಿರಿ । ಬೆಂಗಳೂರು । ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜಿ.

ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜಿ.

E-mail ID : varthalokahpt@gmail.com

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

VOLUME : 01 | ISSUE : 278 | Thursday 27-03-2025 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-

## ಹಂಪಿ ಸ್ಮಾರಕ ವೀಕ್ಷಣೆಗೆ ಆಂತರಿಕ ಸಂಪರ್ಕ ರಸ್ತೆಗಳು, ಕಮಲಾಪುರ ಕೆರೆ ಅಭಿವೃದ್ಧಿಗೆ ಆದ್ಯತೆ

# ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಶೀಘ್ರ ಕ್ರಮ

## ನೂತನ ಗೈಡ್‌ಗಳಿಗೆ ಪ್ರಮಾಣ ಪತ್ರ ವಿತರಿಸಿ ಶಾಸಕ ಹೆಚ್.ಆರ್.ಗವಿಯಪ್ಪ





● ವಾರ್ತಾಲೋಕ ವಾರ್ತೆ

**ಹೊಸಪೇಟೆ ಮಾರ್ಚ್.26 :** ಹಂಪಿಯ ಘನತೆಯನ್ನು ವಿಶ್ವ ದರ್ಜೆಗೇರಿಸಲು ಹಂಪಿಯ ಸ್ಥಳೀಯ ಪ್ರವಾಸಿ ಮಾರ್ಗದರ್ಶಿಗಳ ಪಾತ್ರ ಹಿರಿದು, ಹೊಸ ಗೈಡ್‌ಗಳು ನೈಜ ಇತಿಹಾಸವನ್ನು ಪ್ರವಾಸಿಗರಿಗೆ ತಿಳಿಸಲು ಮುಂದಾಗಿ ಎಂದು ಶಾಸಕ ಹೆಚ್.ಆರ್.ಗವಿಯಪ್ಪ ಹೇಳಿದರು.

ನಗರದ ಮಲ್ಲಿಗೆ ಹೊಟೇಲ್ ಸಭಾಂಗಣದಲ್ಲಿ ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ,ಜಿಲ್ಲಾಪ್ರವಾಸೋದ್ಯಮಅಭಿವೃದ್ಧಿಸಮಿತಿಮತ್ತು ಅಕರ್ವ ಎಂಟರ್‌ಪ್ರೈಸಸ್ ಸಹಯೋಗದಲ್ಲಿ ನಡೆದ ಪ್ರವಾಸಿ ಮಾರ್ಗದರ್ಶಿಗಳಿಗೆ ಒಂದು ದಿನದ ಪುನಶ್ಚೇತನ ತರಬೇತಿ ಕಾರ್ಯಾಗಾರ ಹಾಗೂ ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಹಂಪಿಯಲ್ಲಿ ಸುಮಾರು 1600 ದೇಗುಲಗಳಿವೆ. ವಿಜಯನಗರ ಸಾಮ್ರಾಜ್ಯ ಕೇವಲ ಪ್ರವಾಸಿ ತಾಣವಲ್ಲದೇ ಧಾರ್ಮಿಕ ತಾಣವೂ ಆಗಿದೆ. ನಾಡಮಾತೆ ಭುವನೇಶ್ವರಿ ದೇಗುಲ ಹಂಪಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ಶ್ರೀಪಂಪಾ ವಿರೂಪಾಕ್ಷೇಶ್ವರ ಇತಿಹಾಸ ಶಿವಪುರಾಣದ ಕುರುಹು ತಿಳಿಸುತ್ತದೆ. ತುಂಗಭದ್ರಾ ನದಿ ತೀರದ ದಕ್ಷಿಣ ಕಾಶಿ ಇದಾಗಿರುವುದರಿಂದ ಇದು ವಿಶೇಷ ಸ್ಥಳವಾಗಿದೆ. ದೇಶ ವಿದೇಶದಿಂದ ಆಗಮಿಸುವ ಪ್ರವಾಸಿಗರಿಗೆ ಗೈಡ್ ಕೊರತೆ ಸೃಷ್ಟಿಯಾಗದಂತೆ ಕ್ರಮ ವಹಿಸಿ 75 ಸ್ಮಾರಕ ಮಾರ್ಗದರ್ಶಿಗಳು ಮತ್ತು 25 ಪಾಕೃತಿಕ ಮಾರ್ಗದರ್ಶಿಗಳಿಗೆ ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದು ಮೂರು ತಿಂಗಳ ಕಾಲ ತರಬೇತಿ ನೀಡಿ ಒಟ್ಟು 95 ಪ್ರವಾಸಿ ಮಾರ್ಗದರ್ಶಿಗಳಿಗೆ ಗುರುತಿನ ಚೀಟಿ ಮತ್ತು ಪ್ರಮಾಣ ಪತ್ರ ವಿತರಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಹಂಪಿ ಪ್ರವಾಸೋದ್ಯಮ ಅಭಿವೃದ್ಧಿಗೆ ಆದ್ಯತೆ ನೀಡಿ ಪ್ರತಿ ಸ್ಮಾರಕಗಳಿಗೆ ಆಂತರಿಗೆ ರಸ್ತೆ ಸಂಪರ್ಕ ಕಲ್ಪಿಸುವ ಯೋಜನೆಯನ್ನು ರೂಪಿಸಲಾಗುತ್ತಿದೆ.ಕಮಲಾಪುರಕೆರೆಅಭಿವೃದ್ಧಿ ಪಡಿಸಿ ಪ್ರವಾಸಿಗರ ನೆಚ್ಚಿನ ತಾಣವನ್ನಾಗಿಸಲು ಶೀಘ್ರವೇ ಕ್ರಮವಹಿಸಲಾಗುವುದು. ಪ್ರವಾಸಿ ಮಾರ್ಗದರ್ಶಿಗಳು ಹಂಪಿ ರಾಯಭಾರಿಗಳಿದ್ದಂತೆ, ನೂತನ ಗೈಡ್‌ಗಳು ತಾಳ್ಮೆ, ಸಹನೆ ಹಾಗೂ ನೈಜ ಇತಿಹಾಸ ತಿಳಿಸುವುದಲ್ಲದೇ ಮಹಿಳಾ ಪ್ರವಾಸಿಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕಿದೆ. ಈ ಮೂಲಕ ಹಂಪಿಯ ಘನತೆಯನ್ನು ಸ್ಥಳೀಯರಿಂದಲೇ ವಿಶ್ವದರ್ಜೆಗೇರಿಸಲು ಸಾಧ್ಯವಿದೆ ಎಂದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಮಾತನಾಡಿ, ಪ್ರವಾಸಿಗರಿಗೆ ಗೈಡ್ ಕೊರತೆ ನೀಗಿಸಲು ನೂತನ ಗೈಡ್‌ಗಳನ್ನು ಸರ್ಕಾರದ ನಿಯಮಾನುಸಾರ ಆಯ್ಕೆ ಮಾಡಿ ಅಧಿಕೃತ ಪ್ರಮಾಣ ಪತ್ರ ನೀಡಲಾಗಿದೆ. ಹಂಪಿ ಸೇರಿದಂತೆ ಸ್ಮಾರಕಗಳು ಇಲ್ಲಿನ ಪ್ರಾಕೃತಿಕ ಸೌಂದರ್ಯದ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಿ ಪ್ರವಾಸಿಗರಿಗೆ ಮನಮುಟ್ಟುವಂತೆ ಮಾಹಿತಿ ನೀಡಲು ಸಿದ್ಧರಾಗಬೇಕಿದೆ ಎಂದರು.

ಬಳಿಕ ನೂತನವಾಗಿ ಆಯ್ಕೆಯಾಗಿರುವ 95 ಪ್ರವಾಸಿ ಮಾರ್ಗದರ್ಶಿಗಳಿಗೆ ಗುರುತಿನ ಚೀಟಿ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್, ಉದ್ಯಮಿ ಶ್ರೀಪಾದ್, ತರಬೇತುದಾರ ಚಂದ್ರಶೇಖರ ಶಾಸ್ತ್ರಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಸತ್ಯನಾರಾಯಣ ಮಾತನಾಡಿದರು. ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಪ್ರಭುಲಿಂಗ ತಳಕೇರಿ ಪ್ರಾಸ್ತಾವಿಕ ಮಾತನಾಡಿದರು, ಪ್ರವಾಸೋದ್ಯಮ ಸಿಬ್ಬಂದಿ ಶ್ರೀಹರಿ ಕಾರ್ಯಕ್ರಮ ನಿರ್ವಹಿಸಿದರು.

**ವರದಿ ಅಂಬರೀಶ್ ನಾಯಕ್**

## ಮದ್ಯ, ಮಾದಕ ವಸ್ತು, ಮೊಬೈಲ್ ವಿದ್ಯಾರ್ಥಿಗಳ ಶತ್ರುಗಳು ಇದ್ದಂತೆ: ವಿಚಾರ ಸಂಕಿರಣ ಉದ್ಘಾಟಿಸಿ ಜಿಲ್ಲಾಧಿಕಾರಿ

● ವಾರ್ತಾಲೋಕ ವಾರ್ತೆ



**ಹೊಸಪೇಟೆಮಾರ್ಚ್.25:** ವಿದ್ಯಾರ್ಥಿ ಜೀವನದಲ್ಲಿ ಉಜ್ವಲ ಭವಿಷ್ಯದ ದಾರಿ ತಪ್ಪಿಸುವಮದ್ಯ,ಮಾದಕವಸ್ತುಗಳಿಂದ ದೂರವುಳಿದು ಮೊಬೈಲ್ ಮಾಹಿತಿ, ಸಂಪರ್ಕ ಸಾಧನವಾಗಿ ಬಳಸಿ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅಭಿಪ್ರಾಯ ಪಟ್ಟರು.

ನಗರದ ಶ್ರೀಶಂಕರ್ ಆನಂದ್ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮದ್ಯಪಾನ ಸಂಯಮ ಮಂಡಳಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಏರ್ಪಡಿಸಿದ್ದ ಮದ್ಯ ಹಾಗೂ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳು ಕುರಿತು ವಿಚಾರ ಸಂಕಿರಣ ಹಾಗೂ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಂಗಳವಾರ ಅವರು ಮಾತನಾಡಿದರು,ಯಥೇಚ್ಛವಾಮೊಬೈಲ್ ಬಳಕೆಯಿಂದಾಗಿ ವಿದ್ಯಾರ್ಥಿಗಳ ಮಾನಸಿಕಮತ್ತುಬೌದ್ಧಿಕಬೆಳವಣಿಗೆಯಮೇಲೆದುಷ್ಪರಿಣಾಮಬೀರಲಿದೆ. ವಿದ್ಯಾರ್ಥಿಗಳು ನಿಗಧಿತ ಗುರಿ ತಲುಪಲು ಪರಿಶ್ರಮ ಬಹಳ ಮುಖ್ಯ, ಇದಕ್ಕಾಗಿ ಮದ್ಯ ಮತ್ತು ಮಾದಕ ವಸ್ತುಗಳ ಮೋಹಕ್ಕೆ ಸಿಲುಕಿ ಭವಿಷ್ಯವನ್ನು ಹಾಳು ಮಾಡಿಕೊಳ್ಳಬಾರದು. ವಿದ್ಯಾರ್ಥಿ ಜೀವನ ಹಾಗೂ ಯೌವ್ವನದಲ್ಲಿ ಇವುಗಳಿಗೆ ಕಡಿವಾಣ ಹಾಕಲು ಕೇವಲ ಒಂದು ಮಾರ್ಗವೆಂದರೇ ಮಾನಸಿಕ ನಿಯಂತ್ರಣದಿಂದ ಸಾಧ್ಯ. ವಿದ್ಯಾರ್ಥಿಗಳು ತಮ್ಮ ಮನಸ್ಸನ್ನು ನಿಯಂತ್ರಣ ಮಾಡುವ ಶಕ್ತಿ ಅರಿತರೇ, ಭವಿಷ್ಯದಲ್ಲಿನ ನಿಗಧಿತ ಗುರಿ ಸಾಧನೆ ಬಹುಸುಲಭ. ಪಾಲಕರ ಪೋಷಣೆ, ಸಮಾಜಿಕ ಜವಾಬ್ದಾರಿ ಅರಿತು ಬದುಕಲು ವಿದ್ಯಾರ್ಥಿಗಳು ಸಂಕಲ್ಪ ಮಾಡಬೇಕಿದೆ. ಯುವಕರು ಮಾದಕ ವಸ್ತುಗಳ ಮಾರಾಟ ಕಂಡರೇ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿದರೇ ಕಾನೂನು ಕ್ರಮ ವಹಿಸಲು ಸಿದ್ಧರಿದ್ದೇವೆ ಎಂದರು.

ಜಿಲ್ಲಾ ಪೋಲೀಸ್ ಅಧೀಕ್ಷಕರಾದ ಶ್ರೀಹರಿಬಾಬು.ಬಿ.ಎಲ್ ಮಾತನಾಡಿ, ಮದ್ಯ ಹಾಗೂ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ವಿಚಾರ ಸಂಕಿರಣವನ್ನು ವಿದ್ಯಾರ್ಥಿಗಳನ್ನ ಗುರಿಯಾಗಿಸಿ ಆಯೋಜನೆ ಮಾಡಿರುವುದು ವಿದ್ಯಾರ್ಥಿಗಳ ವಯಸ್ಸು, ವಯೋಮಿತಿಗೆ ತಕ್ಕಂತೆ ಸೆಳೆತಗಳು ಹೆಚ್ಚು. ಅದರಲ್ಲೂ ಮದ್ಯ, ಮಾದಕ ವಸ್ತುಗಳು ಮನಸ್ಸಿಗೆ ಆಹ್ಲಾದತೆಯನ್ನು ಹೆಚ್ಚಿಸಿ ನಶೆಯುಕ್ತರನ್ನಾಗಿಸುವ ನಿಟ್ಟಿನಲ್ಲಿ ವ್ಯಸನಗಳಿಗೆ ಬಲಿಯಾಗುವವರ ಸಂಖ್ಯೆ ಹೆಚ್ಚು. ಇಂತಹ ವ್ಯಸನಗಳಿಂದ ಆರೋಗ್ಯ ಸಮಸ್ಯೆಗಳು ಹೆಚ್ಚಲಿವೆ. ಹಾಗಾಗೀ ದುಶ್ಚಟಗಳಿಂದ ದೂರವಿರಲು ವ್ಯಸನ ರಹಿತ ಕೇಂದ್ರಗಳಿಗೆ ಭೇಟಿ ನೀಡಬೇಕಾದ ಅನಿವಾರ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಫಿಜಿಷಿಯನ್ ಡಾ.ಸೋಮಶೇಖರ್ ಮಾತನಾಡಿ, ಮಾದಕ ವಸ್ತುಗಳಿಗೆ ವ್ಯಸನಗೊಳ್ಳುವ ಪ್ರಮುಖ ಕಾರಣ ಒಂಟಿತನ, ಅಧಿಕ ಹಣ ಮುಖ್ಯವಾಗಿದೆ. ಮದ್ಯ,ನಿಕೋಟಿನ್,ಗಾಂಜಾಸುಲಭವಾಗಿಸಿಗುವಮಾದಕವಸ್ತುಗಳಾಗಿವೆ. ಸಿಗರೇಟು, ಬೀಡಿ ಮತ್ತು ತಂಬಾಕುಗಳಿಂದ ಹೃದಯಾಘಾತ ಮತ್ತು ಹೃದಯ ಸಂಬಂಧಿ ಖಾಯಿಲೆಗಳು, ಬಾಯಿ ಕ್ಯಾನ್ಸರ್, ಧ್ವನಿ ಪೆಟ್ಟಿಗೆ ಕ್ಯಾನ್ಸರ್, ಶ್ವಾಸಕೋಶದ ಕ್ಯಾನ್ಸರ್, ಇತರೆ ಅಂಗಾಂಗಳ ಕ್ಯಾನ್ಸರ್, ಅಸ್ತಮಾ, ಕ್ಷಯರೋಗ, ಶ್ವಾಸಕೋಶ ಸಂಬಂಧಿತ ಸೋಂಕುಗಳು, ಮಧುಮೇಹ, ಮರೆವಿನ ಕಾಯಿಲೆ, ನಪುಂಸಕತ್ವ, ದೃಷ್ಟಿ ದೋಷ ಮತ್ತು ಶ್ರವಣ ದೋಷ, ರೋಗ ನಿರೋಧಕ ಶಕ್ತಿ ಕುಂಠಿತ, ಮೂಳೆ ಸವೆತ, ಚರ್ಮ ಸಂಬಂಧಿ ಕಾಯಿಲೆಗಳು ಸೇರಿದಂತೆ ಮಹಿಳೆಯರಿಗೆ ಋತು ಚಕ್ರದ ಸಮಸ್ಯೆ, ಬಂಜೆತನ, ಗರ್ಭಧಾರಣೆಯಲ್ಲಿ ಕುಂಠಿತ, ಗರ್ಭಪಾತ, ಗರ್ಭಕೋಶ ಮತ್ತು ಗರ್ಭಕಂಠದ ಕ್ಯಾನ್ಸರ್ ಸಮಸ್ಯೆಗಳು ಹೆಚ್ಚಾಗಲಿವೆ. ಕೇವಲ ಕ್ಷಣಿಕ ಸುಖದ ಸೆಳೆತಕ್ಕೆ ಸಿಕ್ಕು ಅನಾರೋಗ್ಯ ಪೀಡಿತರಾಗಲಿದ್ದೀರಿ ಎಂದು ಜಾಗೃತಿ ಮೂಡಿಸಿದರು.

ಈ ವೇಳೆ ಕಾಲೇಜಿನ ಪ್ರಾಂಶುಪಾಲರಾದ ಡಾ.ನಾರಾಯಣ ಹೆಬಸೂರು, ಆರೋಗ್ಯ ಇಲಾಖೆಯ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಬಿ.ಷಣ್ಮುಖ ನಾಯ್ಕ, ಕನ್ನಡ ವಿಭಾಗದ ಮುಖ್ಯಸ್ಥರಾದ ಸಿ.ದೇವಣ್ಣ, ಯುವ ರೆಡ್‌ಕ್ರಾಸ್ ಕಾರ್ಯಕ್ರಮ ಅಧಿಕಾರಿ ಡಾ.ಸಿ.ವೀರೇಂದ್ರ ಪಾಟೀಲ್, ಐಕ್ಯೂಎಸಿ ಸಂಚಾಲಕ ಡಾ.ಗುರುರಾಜ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಧನಂಜಯಪ್ಪ.ಬಿ ವೇದಿಕೆಯಲ್ಲಿದ್ದರು. ಉಪನ್ಯಾಸಕರಾದ ಅಮೃತ್ ಡಾ.ದಾರುಕಾಸ್ವಾಮಿ ನಿರ್ವಹಿಸಿದರು. ರಂಗಲೋಕ ಕಲಾ ಸಂಸ್ಥೆಯ ಕಲಾವಿದರು ಜಾಗೃತಿ ಗೀತೆಗಳ ಮೂಲಕ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿದರು.

**ವರದಿ ಅಂಬರೀಶ್ ನಾಯಕ್**

## ಡಾ. ಬಿ.ಅರ್. ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್‌ರವರ ಜಯಂತಿ ಪ್ರಯುಕ್ತ ಪೂರ್ವ ಸಿದ್ಧತಾ ಸಭೆ

# ಡಾ. ಬಿ.ಆರ್. ಅಂಬೇಡ್ಕರ್‌ರವರ 134ನೇ ಜಯಂತಿ ಅದ್ದೂರಿಯಾಗಿ ಆಚರಿಸಲು ನಿರ್ಧಾರ

● ವಾರ್ತಾಲೋಕ ವಾರ್ತೆ

**ಕೊಟ್ಟೂರು: ಮಾರ್ಚ್ 26 :** ಡಾ. ಬಿ ಅರ್ ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ರವರ ಮಹಾನ್ ನಾಯಕರ ಜಯಂತಿಯನ್ನು ಪ್ರತಿಯೊಂದು ಇಲಾಖೆ ವರ್ಗದವರು ಹಬ್ಬದ ವಾತಾವರಣದಂತೆ ಆಚರಿಸಲು ಮುಂದಾಗಬೇಕು ಎಂದು ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿಯ ಅಧ್ಯಕ್ಷರಾದ ತಹಶೀಲ್ದಾರ್ ಅಮರೇಶ್ ಜಾಲಹಳ್ಳಿ ರವರು ತಿಳಿಸಿದರು

ಪಟ್ಟಣದ ತಾಲೂಕು ಕಚೇರಿಯ ಮಹಾತ್ಮ ಗಾಂಧಿ ಸಭಾಂಗಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ ಅರ್. ಅಂಬೇಡ್ಕರ್ ರವರ 134 ನೇ ಜನ್ಮ ದಿನಾಚರಣೆ ಹಾಗೂ ಬಾಬು ಜಗಜೀವನ್ ರಾಮ್ ರವರ 118 ನೇ ಜನ್ಮ ದಿನಾಚರಣೆಯನ್ನು ಆಚರಿಸುವ ಸಂಬಂಧ ಪೂರ್ವ ಸಿದ್ಧತಾ ಸಭೆಯನ್ನು ಕುರಿತು ಮಾತನಾಡಿದರು

ಈ ಇಬ್ಬರು ರಾಷ್ಟ್ರ ನಾಯಕರು ಭಾರತ ದೇಶಕ್ಕೆ ಅಪಾರ ಕೊಡಿಗೆ ನೀಡಿದ್ದಾರೆ ಆದರಿಂದಾಗಿ ಇವರ ಜನ್ಮ ದಿನಾಚರಣೆಯಲ್ಲಿ ಎಲ್ಲ ಇಲಾಖೆ ಅಧಿಕಾರಿ ವರ್ಗದವರು ಭಾಗವಹಿಸಿ ಇವರ ತತ್ವ ಆದರ್ಶಗಳನ್ನು ಸಮಾಜಕ್ಕೆ ರಹಾನಿಸಬೇಕಿದೆ ಎಂದರು.

ನಂತರ ಸಭೆಯಲ್ಲಿ ದಲಿತ ಮುಖಂಡರುಗಳ ಹಾಗೂ ರೈತ ಮುಖಂಡರ ಸರ್ವ ಅಭಿಪ್ರಾಯದಂತೆ ಏಪ್ರಿಲ್ 05 ರಂದು ಬಾಬು ಜಗಜೀವನ್ ರಾವ್ ರವರ ಜಯಂತಿಯನ್ನು ತಾಲೂಕು ಕಚೇರಿಯಲ್ಲಿಯೇ ಸರಳವಾಗಿ ಆಚರಿಸಲು ನಿರ್ಧರಿಸಿ ಏಪ್ರಿಲ್ 14 ರಂದು ಡಾ.ಬಿ ಅರ್ ಅಂಬೇಡ್ಕರ್ 134 ನೇ ಜಯಂತಿಯನ್ನು ಬಾಬು ಜಗಜೀವನ್ ರಾವ್ ರವರ ಭಾವಚಿತ್ರ ಇರಿಸುವ ಮೂಲಕ ಅಂಬೇಡ್ಕರ್ ಜಯಂತಿಯನ್ನು ವೇದಿಕೆ ಕಾರ್ಯಕ್ರಮವಾಗಿ ಸಿದ್ಧಪಡಿಸಿ ಅದ್ದೂರಿಯಾಗಿ ಆಚರಣೆ ಮಾಡಲು ನಿರ್ಧರಿಸಲಾಯಿತು.



ಕಾರ್ಯಕ್ರಮದಲ್ಲಿ ಅಂಬೇಡ್ಕರ್ ವಿಚಾರಧಾರೆಯ ಹಂಚಲು ವಿಶೇಷ ಉಪನ್ಯಾಸಕರನ್ನು ಕರೆ ತರಬೇಕು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಗಣ್ಯರಿಗೆ ಸನ್ಮಾನ, ಸೌಂಡ್ ಸಿಸ್ಟಮ್ಸ್, ಪಟ್ಟಣದ ಸುತ್ತಲೂ ಕಂಬಗಳಿಗೆ ನೀಲಿ ಬಾವುಟಗಳು ಹಾಕಬೇಕು ಮತ್ತು ಕಲಾ ತಂಡಗಳನ್ನು ರಚಿಸಿವುದು ಮುಖಂತರ ಕಾರ್ಯಕ್ರಮದ ರೂಪರೇಷೆಗಳನ್ನುಅಚ್ಚುಕಟ್ಟಾಗಿಸಂಬಂಧಪಟ್ಟ ಇಲಾಖೆಯವರು ನೆರವೇರಿಸಬೇಕು ಎಂದು. ಮುಖಂಡ ಬಿ.ಮರಿಸ್ವಾಮಿ ಯವರು ಸಲಹೆ ಸೂಚನೆ ನೀಡಿದರು.

ಅನುದಾನಿತ ಹಾಗೂ ಅನುದಾನ ರಹಿತ ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾವ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಗೌರವನ್ನು ಸೂಚಿಸಲು ಶಾಲಾ ಕಾಲೇಜುಗಳಿಗೆ ಸಂಬಂಧ ಪಟ್ಟ ಅಧಿಕಾರಿಗಳು ಖಡಕ್ ಆದೇಶವನ್ನು ಹೊರಡಿಸಬೇಕು ಕಿರು ಚಿತ್ರದ ಮೂಲಕ ಕಾರ್ಯಕ್ರಮವನ್ನು ಏರ್ಪಡಿಸಬೇಕು ಎಂದು ವಕೀಲ ಹನುಮಂತಪ್ಪ ನವರು ಸಲಹೆ ನೀಡಿದರು.

ಈ ಪೂರ್ವ ಸಿದ್ಧತಾ ಸಭೆಗೆ ಕೆಲವು ತಾಲೂಕು ಮಟ್ಟದ ಅಧಿಕಾರಿಗಳು ಪ್ರತಿ ಬಾರಿಯೂ ಗೈರು ಆಗಿರುವುದು ಬೇಸರದ ವಿಚಾರ ಗೈರು ಆಗಿರುವ ಅಧಿಕಾರಿಗಳಿಗೆ ನೋಟಿಸ್ ನೀಡುವುದರ ಮುಖಂತರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಾಲೂಕು ದಂಡಾಧಿಕಾರಿಗೆ ದಲಿತ ಮುಖಂಡರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ತಾ ಪಂ. ಇ ಒ. ಆನಂದ್ ಕುಮಾರ್, ಶಾಹಿಕ ಅಮ್ಮದ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ, ಪ. ಪಂ ಮುಖ್ಯಧಿಕಾರಿ ಎ. ನಾಸಾರುಲ್ಲಾ, ಬಿಇ ಒ ಪದ್ಮನಾಮ ಕರಣಂ, ಎಸ್. ಪಕ್ಕೀರಪ್ಪ ಕಚೇರಿ ಅಧೀಕ್ಷಕರು ಸಮಾಜ ಕಲ್ಯಾಣ ಇಲಾಖೆ ಕೂಡ್ಲಿಗಿ, ಬದ್ದಿ. ದುರುಗಪ್ಪ, ಡಾಕ್ಟರ್ ಬಿ ಆರ್ ಅಂಬೇಡ್ಕರ್ ಸಂಘ ತಾಲೂಕು ಅಧ್ಯಕ್ಷರು, ಜಿಲ್ಲಾ ಮುಖಂಡ ತೆಗ್ಗಿನಕೇರಿ ಕೊಟ್ರೇಶ್, ಶಿವಣ್ಣ ಎಪಿಎಂ ಸಿ ಉಪಾಧ್ಯಕ್ಷರು, ಮುಖಂಡ, ಕಂದಗಲ್ ಪರಶುರಾಮ್, ಎನ್‌ಎಫ್ ಐಡಬ್ಲ್ಯುಎಫ್ ರಾಜ್ಯ ಕಾರ್ಯದರ್ಶಿ ರೇಣುಕಮ್ಮ, ರೈತ ಸಂಘ ಮುಖಂಡ ಭರಮಣ್ಣ, ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಮುಖಂಡರುಗಳು ಇದ್ದರು.

**ವರದಿ ಮಂಜುನಾಥ್**

# 10 ನಿಮಿಷಕ್ಕೆ ಮುಗಿಸಿದ ಪುರಸಭೆ ಬಜೆಟ್ ಸಭೆ





● ವಾರ್ತಾಲೋಕ ವಾರ್ತೆ

**ಹೊಸಪೇಟೆ: ಕಮಲಾಪುರ: ಮಾರ್ಚ್ 26 :** 2025–26ನೇ ಸಾಲಿನ ಕಮಲಾಪುರ ಪುರಸಭೆ ಬಜೆಟ್ ಸಾರ್ವಜನಿಕರ ಅಭಿಪ್ರಾಯದಂತೆ ಬಜೆಟ್ ತಯಾರಿಸಿ ಪುರಸಭೆ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಆಯ ವ್ಯಯ ಮಂಡನೆ ಬುಧವಾರ ಇಲ್ಲಿನ ಪುರಸಭೆ ಸಭಾಂಗಣದಲ್ಲಿ ಕೇವಲ 10 ನಿಮಿಷದಲ್ಲಿ ಸರ್ವ ಸದಸ್ಯರ ಒಪ್ಪಿಗೆಯೊಂದಿಗೆ ಮುಕ್ತಾಯಗೊಂಡಿತು.

ಪುರಸಭೆ ಅಧ್ಯಕ್ಷೆ ಅಮೀನ ಅವರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿದ್ದು ಪಟ್ಟಣದಲ್ಲಿ ಅಭಿವೃದ್ಧಿ ಕೆಲಸಗಳು, ಮೂಲ ಸೌಲಭ್ಯಗಳ ಕುರಿತು ಜನರ ಅಭಿಪ್ರಾಯಪಡೆದನಂತರಬಜೆಟ್‌ಮಂಡನೆಯ ಅನುಮೋದನೆಗಾಗಿ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಲು ಉಪಾಧ್ಯಕ್ಷ ಹೆಚ್ ಗೋಪಾಲಕೃಷ್ಣ ಮೂರು ಪುಟದ ಆಯವ್ಯಯ ಪ್ರತಿಯನ್ನು ಸಂಪೂರ್ಣವಾಗಿ ಓದಿದರು. ಸದಸ್ಯ ಸೈಯದ್ ಮುಕ್ತಿಯರ್ ಪಾಷ ಮಾತನಾಡಿ ಪಟ್ಟಣದ ಜನರಿಗೆ ಬೇಕಾಗಿರುವ ಮೂಲ ಸೌಲಭ್ಯಗಳು ಒದಗಿಸುವ ಪ್ರಯತ್ನಗಳು ಮಾಡಿದರೆ ಉಳಿದ ಏಳು ತಿಂಗಳ ಅವಧಿಯಲ್ಲಿ ಜನರು ನಮ್ಮನ್ನು ಒಪ್ಪುತ್ತಾರೆ.ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ತಿರಸ್ಕರಿಸುತ್ತಾರೆಂದು ಖಾರವಾಗಿ ನುಡಿದು ಸಭೆಯಲ್ಲಿ ಹಾಜರಿದ್ದ ಅಧಿಕಾರಗಳಿಗೆ ಕೆಲವು ಸಲಹೆಗಳನ್ನು ನೀಡಿದರು.

* ರಾಜಸ್ವ ಸಂಗ್ರಹಣೆ :201.39 ಲಕ್ಷಗಳುಸ್ವಂತ ಮೂಲದಿಂದ ಆದಾಯವನ್ನು ಸಂಗ್ರಹಿಸುವ ಗುರಿ,

* ಕೇಂದ್ರ ಹಣಕಾಸು ಆಯೋಗದ ಅನುದಾನ (15ನೇ ಹಣಕಾಸು)320,00 ಲಕ್ಷಗಳು.

202425ನೇಸಾಲಿನವಿವಿಧಮೂಲಗಳವೆಚ್ಚದ ವಿವರಗಳು:ಸಾಮಾನ್ಯಕಚೇರಿ ಹಾಗೂ ಆಡಳಿತ ವೆಚ್ಚಗಳು. ಅಂಚೆ, ದೂರವಾಣಿ, ಇಂಟರ್ನೆಟ್, ವಿದ್ಯುತ್, ಮುದ್ರನ,ಡೀಸೆಲ್, ಲೇಖನ ಸಾಮಗ್ರಿ, ಹೊರಗುತ್ತಿಗೆ ವೇತನಗಳು, ವೃತ್ತಿಪರ ಫೀಸ್ಗಳು, ವಾಹನಗಳ ನಿರ್ವಹಣೆ ಕ,ಚೇರಿಯ ವಾಹನ, ನೀರು ಪೂರೈಕೆ ಸಂಬಂಧಿಸಿದ ವೆಚ್ಚಗಳಿಗಾಗಿ, ಸಭಾ ವೆಚ್ಚ, ಕಾರ್ಯಕ್ರಮ ವೆಚ್ಚ, ಸದಸ್ಯರ ಗೌರವದನ,ಬ್ಯಾಂಕ್ ಶುಲ್ಕ ಹಾಗೂ ಇತ್ಯಾದಿಗಳಿಗೆ156.00 ಲಕ್ಷದ ವೆಚ್ಚಗಳನ್ನು ಅಂದಾಜಿಸಲಾಗಿದೆ.

* ವಿವಿಧ ಮೂಲಭೂತ ಆಸ್ತಿಗಳ ನಿರ್ವಹಣೆ: ರಸ್ತೆಗಳ ಮತ್ತು ಚರಂಡಿ ನಿರ್ಮಾಣ ನಿರ್ವಹಣೆಗಾಗಿ,232.00 ಲಕ್ಷಗಳು.

ನೀರು ಸರಬರಾಜು ದುರಸ್ತಿ, ಖರೀದಿ ಮತ್ತು ವಿತರಣಾ ವ್ಯವಸ್ಥೆ ಮಾಸಿಕ ನಿರ್ವಹಣಾ ವೆಚ್ಚ. 72 ಲಕ್ಷಗಳು. ಘನತಾಜ್ಯ ವಸ್ತು ವಿಲೇವಾರಿ ವಿಲ್ಲವಾರೆ ಕುರಿತು ಅಧ್ಯಯನ ಪ್ರವಾಸ ಮತ್ತು ಜಾಗೃತಿ ಕಾರ್ಯಕ್ರಮಗಳು ಹಾಗೂ ಅಭಿವೃದ್ಧಿ ಕಾಮಗಾರಿಗಾಗಿ 75.50 ಲಕ್ಷಗಳು.

* ರಸ್ತೆ,ಚರಂಡಿ,ಉದ್ಯಾನ,ನೀರು ಸರಬರಾಜು, ಸ್ಮಶಾನ ವಿದ್ಯುತ್ ಕಾಮಗಾರಿ ಕಟ್ಟಡಗಳು ಶೌಚಾಲಯ ಇತ್ಯಾದಿಗಳಿಗೆ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳ ಕಾಮಗಾರಿಗಳಿಗಾಗಿನಗೋರೋತ್ತಾನ ಅನುದಾನದ ಅಡಿಯಲ್ಲಿ 474.00 ಲಕ್ಷಗಳ ಅನುದಾನವನ್ನು ನಿರೀಕ್ಷಿಸಲಾಗಿದೆ.

* ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಯೋಜನೆ (ಶೇ 24.10%) ಯೋಜನೆ ಅಡಿಯಲ್ಲಿ 50 ಲಕ್ಷ ರೂಗಳನ್ನು ವೆಚ್ಚ ಮಾಡಲು ಉದ್ದೇಶಿಸಿದೆ.

* ನಗರದ ಇತರೆ ಬಡ ಜನರ ಕಲ್ಯಾಣ ಯೋಜನೆ. ಶೇ 7.25 % ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿ ಇತರೆ ಬಡಜನರ ಕಲ್ಯಾಣಕ್ಕಾಗಿ 20 ಲಕ್ಷಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ.

* ವಿಕಲಚೇತನರ ಕಲ್ಯಾಣ ಯೋಜನೆ( ಶೇ 5% ) 10 ಲಕ್ಷ ರೂಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ.

ಹೀಗೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸುಧಾರಣೆಗಳನ್ನು ಜಾರಿಗೊಳಿಸಲು ನಿರ್ಧರಿಸಲಾಗಿದ್ದು, ವಿವಿಧ ಮೂಲಗಳಿಂದ 2795.00 ಲಕ್ಷಗಳನ್ನು ಸಂಗ್ರಹಿಸಲು ಹಾಗೂ 2795.00 ಲಕ್ಷಗಳನ್ನು ಸಂಗ್ರಹಿಸಲು ಹಾಗೂ2783.78 ಲಕ್ಷಗಳ ವೆಚ್ಚವನ್ನು ನಿರೀಕ್ಷಿಸಿ ಒಟ್ಟಾರೆ 11 ಕೋಟಿ 22 ಲಕ್ಷ ರೂಗಳ ಉಳಿತಾಯ ಆಯವ್ಯಯ ಮಂಡಿಸಿ 2025 26 ನೇ ಸಾಲಿನ ಆರ್ಥಿಕವರ್ಷದಆಯವ್ಯಯಅಂದಾಜುಗಳಿಗೆ ಅನುಮೋದನೆಗಾಗಿ ಜಿಲ್ಲಾಧಿಕಾರಿಗಳಿಗೆ ವರದಿ ನೀಡಲು ಕೈ ಎತ್ತುವ ಮೂಲಕ ಸರ್ವ ಸದಸ್ಯರು ಒಪ್ಪಿಗೆ ಸೂಚಿಸಿದರು.

ಈ ಕುರಿತು ಪುರಸಭೆ ಅಧ್ಯಕ್ಷೆ ಅಮೀನಾ ಮಾತನಾಡಿ ಅನೇಕ ಜ್ವಲಂತ ಸಮಸ್ಯೆಗಳು ಮೂಲಭೂತ ಸೌಕರ್ಯಗಳು ಸಾಮಾನ್ಯ ಜನರಿಗೆ ಒದಗಿಸುವಲ್ಲಿ ಮುಖ್ಯ ಅಧಿಕಾರಿಗಳು ಮತ್ತು ಪುರಸಭೆ ಅಧಿಕಾರಿಗಳು, ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ ಕೈಜೋಡಿಸಬೇಕು ಮತ್ತು ಯಾವುದೇ ಕಾರಣಕ್ಕೆ ಜನಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಬೇಕು ಎಂದರು

ಬಜೆಟ್ ಮಂಡನೆ ತಯಾರಿಸಿದ ಅಕೌಂಟೆಂಟ್ ಎನ್ ಪಿ ಅರವಿಂದ್ ಕುಮಾರ್ ರನ್ನು ಸರ್ವ ಸದಸ್ಯರು ಮತ್ತು ಅಧಿಕಾರಿಗಳು ಪ್ರಶಂಶಿಸಿದರು. ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಅಜಯ್ ಕುಮಾರ್, ಕೆಲವು ಸಮಸ್ಯೆಗಳಿಗೆ ಅಧಿಕಾರಿಗಳ ಜೊತೆ ವಾಗ್ವಾದ ನಡೆಸಿದರು.


ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಬಿ ಈರಣ್ಣ,ಇಂಜಿನಿಯರ್ ಟಿಪ್ಪು ಮತ್ತು ಮಲ್ಲಿಕಾರ್ಜುನಗೌಡ ಸದಸ್ಯರಾದ ರಾಜ, ಸೈಯದ್ ಅಮಾನುಲ್ಲ, ಪಿ ರವಿಕುಮಾರ್, ಪಾರ್ವತಿ, ಪಾಲಯ್ಯ, ಬಿ ಕಿಶೋರ್ ಕುಮಾರ್, ಗೌಸಿಯಾ ಬೇಗಂ, ಮಮತಾ, ಈಶ್ವರಮ್ಮ, ಬೋರಮ್ಮ, ರಾಮಸ್ವಾಮಿ ಮಾಳ್ಗಿ, ಎಂ ಲಿಂಗಪ್ಪ, ಎನ್ ಗಂಗಮ್ಮ, ಜ್ಯೋತಿಬಾಯಿ, ನಾಮನೆಟ್ ಕೌನ್ಸಿಲರ್ಸ್ ದೇವರ ಮನೆ ಕಲ್ಲೇಶ್ವರ, ಟಿ ಚಾಂದ್ ಬಾಷಾ,ಜೆ ಚೆನ್ನಪ್ಪ, ಜಂಬಯ್ಯ ಎಂ, ಕೆ ಸೋಮಶೇಖರ ಮತ್ತು ಪುರಸಭೆ ಅಧಿಕಾರಿಗಳು ಇದ್ದರು.

**ವರದಿ ಎ ಚಿದಾನಂದ**

# ಒಂದ ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗಾಗಿ ಬೇಸಿಗೆ ಶಿಬಿರ

● ವಾರ್ತಾಲೋಕ ವಾರ್ತೆ

**ಹರಪನಳ್ಳಿ: ಮಾರ್ಚ್ 26 :** ಮಕ್ಕಳ ಕಲಿಕೆಯನ್ನು ಉತ್ತಮಗೊಳಿಸುವ ಸಲುವಾಗಿ ಎಕ್ಸ್‌ಪರ್ಟ್ ಕೋಚಿಂಗ್ ಸೆಂಟರ್ ವತಿಯಿಂದ ಏ.7ರಿಂದ ಮೇ.25ರ ವರೆಗೆ ಹರಪನಹಳ್ಳಿ ಪಟ್ಟಣದ ಮೇಗಳಪೇಟೆಯ ಬಂಗ್ಲೇರ ಓಣಿಯ ಕೆಂಪೇಶ್ವರ ಮಠದ ಹಿಂಬಾಗದ ಆದರ್ಶ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಗಿದೆ ಎಂದು ಪ್ರೋ. ಬಿಂದು ಹೆಚ್. ಡಿ.ಮತ್ತು ಪ್ರೋ.ಪದ್ಮಾ ಅವರು ತಿಳಿಸಿದ್ದಾರೆ.



ಈ ಶಿಬಿರದಲ್ಲಿ ವಿಷಯಧಾರಿತ ಪಾಠಗಳು, ಆಟದೊಂದಿಗೆ ಪಾಠ, ಅಬಾಕಾಸ್, ಸ್ಪೋಕನ್ ಇಂಗ್ಲೀಷ್, ಹ್ಯಾಂಡ್ ರೈಟಿಂಗ್ ಸ್ಕಿಲ್,ಸಾಮಾನ್ಯ ಜ್ಞಾನ, ಚಿತ್ರಕಲೆ ಮತ್ತು ಸಂಗೀತ ನೃತ್ಯದೊಂದಿಗೆ ಮಕ್ಕಳ ಕಲಿಕೆಗೆ ಹೆಚ್ಚು ಒತ್ತು ನೀಡುಲಾಗುವುದು.

ಶಿಬಿರದಲ್ಲಿ 1ರಿಂದ 8ನೇ ತರಗತಿಗೆ ಬೆಳಗ್ಗೆ 9 ರಿಂದ ಮಧ್ಯಾಹ್ನ 2ರವಗೆ, ಮತ್ತು 9 ಮತ್ತು 10ನೇ ತರಗತಿಯವರಿಗೆ ಮಧ್ಯಾಹ್ನ 3ರಿಂದ ಸಂಜೆ 6ರ ವರೆಗೆ ತರಗತಿಗಳು ನಡೆಸಲಾಗುವುದು.

ಶಿಬಿರಕ್ಕೆ ಭಾಗವಹಿಸುವವರು ಇಂದಿನಿಂದಲೇ ನೊಂದಣಿ ಮಾಡಿಕೊಳ್ಳಬಹದು.

ಶಿಬಿರದಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು ಹೆಚ್ಚಿನಮಾಹಿತಿಗಾಗಿಪ್ರೋ.ಬಿಂದು ಹೆಚ್. ಡಿ 7411494967 ಮತ್ತು ಪ್ರೋ. ಪದ್ಮ ಬಿ. 7338230200ಗೆ ಸಂಪರ್ಕಿಸಬಹುದು ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ವರದಿ ಎಜಿ ರೆಡ್ಡಿ**

# ರೈಲಿಗೆ ಸಿಲುಕಿ ವ್ಯಕ್ತಿ ಸಾವು



● ವಾರ್ತಾಲೋಕ ವಾರ್ತೆ

**ಕೊಟ್ಟೂರು ಮಾ.26 :** ಕೊಟ್ಟೂರು ತಾಲೂಕಿನ ಹರಾಳು ಗ್ರಾಮದ ವ್ಯಕ್ತಿಯೊಬ್ಬ ರೈಲಿಗೆ ಸಿಲುಕಿ ಮೃತಪಟ್ಟಿರುವ ಘಟನೆ ಮಂಗಳವಾರ ಹರಾಳು ಗ್ರಾಮದ ಹೊರ ವಲಯದ ನಡೆದಿದೆ. ಹರಾಳು ಗ್ರಾಮದ ಭಂಗಿ ಅಂಜಿನ ಪ್ಪನ ಮಗ ಭಂಗಿ ನಾಗರಾಜ(29) ಮೃತಪಟ್ಟಿರುವ ದುರ್ದೈವಿ. ಮುಂಜಾನೆ 8:30ಕ್ಕೆ ಬರುವ ರೈಲಿಗೆ ಸಿಲುಕಿ ಮೃತಪಟ್ಟಿದ್ದಾನೆ ಎಂಬ ಸಾವಿನ ಸುದ್ದಿ ಕೇಳಿ ಕುಟುಂಬದಲ್ಲಿ ಆಕ್ರಂದನ ಮುಗಿಲು ಮುಟ್ಟಿತ್ತು. ಸಾವಿಗೆ ನಿಕಾರವಾದ ಮಾಹಿತಿ ತಿಳಿದು ಬಂದಿಲ್ಲ. ಪ್ರಕರಣವನ್ನು ರೈಲ್ವೆ ಪೊಲೀಸ್ ರು ದಾಖಲಿಸಿಕೊಂಡಿದ್ದಾರೆ. ಇದೇ ಗ್ರಾಮದ ಜಡ್ರಿ ಕೊಟೇಪ್ಪ ಎಂಬ ವ್ಯಕ್ತಿ ವಾರದ ಹಿಂದೆ ರೈಲುಗೆ ಸಿಲುಕಿ ಮೃತಪಟ್ಟಿದ್ದನು. ಒಂದೇ ವಾರದಲ್ಲಿ ಒಂದೇ ಗ್ರಾಮದ ಇಬ್ಬರು ವ್ಯಕ್ತಿಗಳು ರೈಲಿಗೆ ಸಿಲುಕಿ ಮೃತಪಟ್ಟಿರುವ ಎರಡು ಪ್ರಕರಣ ದಾಖಲಾಗಿವೆ. ರೈಲ್ವೆ ಇಲಾಖೆ ಇಂತಹ ಘಟನೆ ನಡೆಯದಂತೆಮುನ್ನೆಚ್ಚರಿಕೆಕ್ರಮಕೈಗೊಳ್ಳಬೇಕು ಎಂದು ಗ್ರಾಮಸ್ಥರು ಹೇಳಿದರು.

# ಮಧಭಾಂವಿ ಪಿಕೆಪಿಎಸ್ ಅಧ್ಯಕ್ಷರಾಗಿ ಬಸವರಾಜ ಒಂಟಿ ಆಯ್ಕೆ



**ಮಹಾಲಿಂಗಪುರ:** ಸಮೀಪದ ಮದಭಾಂವಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಸವರಾಜ ರಾಮಪ್ಪ ಒಂಟಿ ಅವಿರೋಧ ಆಯ್ಕೆಯಾದರು. ಹಿಂದಿನ ಅಧ್ಯಕ್ಷ ಮುತ್ತಪ್ಪ ಸದಾಶಿವ ವಗ್ಗರ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ಜರುಗಿತು.

ಸೋಮವಾರನಡೆದಅಧ್ಯಕ್ಷಸ್ಥಾನದಚುನಾವಣೆಯಲ್ಲಿ ಬಸವರಾಜ ರಾಮಪ್ಪ ಒಂಟಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಮದಭಾಂವಿ ಪಿಕೆಪಿಎಸ್ ನೂತನ ಅಧ್ಯಕ್ಷರಾಗಿ ಬಸವರಾಜ ಒಂಟಿ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಜೆ. ಜಿ. ಸವದಿ ಘೋಷಿಸಿದರು.

ನೂತನ ಅಧ್ಯಕ್ಷರನ್ನು ಸಂಘದ ಎಲ್ಲಾ ನಿರ್ದೇಶಕರ, ಸಿಬ್ಬಂದಿ ವರ್ಗದ ವತಿಯಿಂದ ಸನ್ಮಾನಿಸಲಾಯಿತು.

ಉಪಾಧ್ಯಕ್ಷೆ ಶ್ರೀಮತಿ ಅನ್ನಪೂರ್ಣ ಭೀಮಪ್ಪ ಕೇದಾರಿ, ನಿರ್ದೇಶಕರಾದ ರಾಚಪ್ಪ ಶಂಕ್ರೆಪ್ಪ ಮಹಾಲಿಂಗಪುರ, ವಿಠ್ಠಲ ಶಿವಣಪ್ಪ ಧರ್ಮಟ್ಟಿ, ಸುಭಾಸ ಬಸಪ್ಪ ಬಿರಾಣಿ, ಸೈಯದಸಾಬ ಅಲ್ಲಾಸಾಬ ಮುಲ್ಲಾ, ಭೀಮಪ್ಪ ರಾಮಪ್ಪ ಚಿಕ್ಕೋಡಿ,

ಭಗವಂತ ತಿಮ್ಮಾನಿ ಗಾಡಿವಡ್ಡರ, ಮಾರುತಿ ಯಲ್ಲಪ್ಪ ಭೋಜನವರ, ಶಂಕರ ಸದಾಶಿವ ಉರಭಿನವರ, ಶ್ರೀಮತಿ ಜಯಶ್ರೀ ಮಹಾಲಿಂಗ ತಿಮ್ಮಾಪೂರ, ಸಂಘದ ಮುಖ್ಯ ಕಾರ್ಯನಿರ್ವಾಹಕ ಶ್ರೀಶೈಲ ಮಠಪತಿ ಉಪಸ್ಥಿತರಿದ್ದರು.

## 20ನೇ ವರ್ಷದ ಮಹಾದಾಸೋಹ। ಶ್ರೀಶೈಲಂನಲ್ಲಿನ ಮಹಾದಾಸೋಹಕ್ಕೆ ತೆರಳಿದ ಸೇವಾ ಸಮಿತಿ

# ಮಾರ್ಚ 30 ರವರೆಗೆ ನಿರಂತರ ಅನ್ನಪ್ರಸಾದ ವಿತರಣೆ

**ಮಹಾಲಿಂಗಪುರ :** ಯುಗಾದಿ ಜಾತ್ರಾ ಮಹೋತ್ಸವದ ನಿಮಿತ್ಯ ಪಾದಯಾತ್ರೆಯ ಮೂಲಕ ಶ್ರೀಶೈಲಕ್ಕೆ ತೆರಳಿದ ಭಕ್ತರಿಗಾಗಿ ಮಹಾದಾಸೋಹ ನೆರವೇರಿಸುವುದಕ್ಕಾಗಿ ಪಟ್ಟಣದ ಶ್ರೀಶೈಲ ಮಲ್ಲಿಕಾರ್ಜುನ ಪಾದಯಾತ್ರೆಯ ಅನ್ನದಾಸೋಹ ಸೇವಾ ಸಮಿತಿ ಹಿಟ್ಟಕ್ಕಿ ತುಂಬಿದ ವಾಹನದೊಂದಿಗೆ ರವಿವಾರ ರಾತ್ರಿ ಶ್ರೀಶೈಲಕ್ಕೆ ಪ್ರಯಾಣ ಬೆಳೆಸಿದರು.

ಶ್ರೀಶೈಲ ಪಾದಯಾತ್ರೆ ಕೈಗೊಂಡ ಸಕಲ ಭಕ್ತರಿಗಾಗಿ ಮಹಾಲಿಂಗಪುರದ ಭಕ್ತರಿಂದ ಇಪ್ಪತ್ತನೇ ವರ್ಷದ ಮಹಾದಾಸೋಹಕ್ಕಾಗಿ ಪಟ್ಟಣದ ದಾನಿಗಳು, ಭಕ್ತರು ನೀಡಿದ ಸಜ್ಜಕ ರವಾ, ಅಕ್ಕಿ, ಬೆಲ್ಲ, ಬೇಳೆ ಕಾಳುಗಳು, ಖಾರ, ತರಕಾರಿ ಸೇರಿದಂತೆ ದಾಸೋಹಕ್ಕೆ ಬೇಕಾಗುವ ಸಕಲ ಸಾಮಗ್ರಿಗಳನ್ನು ದಾನರೂಪದಲ್ಲಿ ನೀಡಿದ್ದಾರೆ. ಅವಶ್ಯಕ ಸಾಮಗ್ರಿಗಳನ್ನು ಸೇವಾ ಸಮಿತಿಯಿಂದಲೂ ಖರೀದಿಸಲಾಗಿದೆ.



ಸುಮಾರು 15 ಟನ್ ನಷ್ಟು ಸಂಗ್ರಹವಾದ ಆಹಾರ ಸಾಮಗ್ರಿಗಳಿಂದ ಶ್ರೀಶೈಲಂ ಮಹಾಕ್ಷೇತ್ರದ ಛತ್ರಪತಿ ಶಿವಾಜಿ ಭವನದ ಹತ್ತಿರ ಇದೆ. ಮಾರ್ಚ 25 ರಿಂದ ಯುಗಾದಿ ಪಾಡ್ಯೆಯ ಮಾರ್ಚ 30 ರವರೆಗೆ ಆರು ದಿನಗಳ ಕಾಲ ನಿರಂತರ ಮಹಾದಾಸೋಹ ಜರುಗಲಿದೆ. ಈ ಆರು ದಿನಗಳ ಕಾಲ ಶ್ರೀಶೈಲ ಕ್ಷೇತ್ರಕ್ಕೆ ಬರುವ ಪಾದಯಾತ್ರಿಕರು, ಭಕ್ತರು ಪ್ರಸಾದ ಸ್ವೀಕರಿಸಬೇಕೆಂದು ಶ್ರೀಶೈಲ ಮಲ್ಲಿಕಾರ್ಜುನ ಪಾದಯಾತ್ರೆಯ ಸೇವಾ ಸಮಿತಿ ಅಧ್ಯಕ್ಷ ವಿಜುಗೌಡ ಪಾಟೀಲ ತಿಳಿಸಿದರು.

ಮಹಾಲಿಂಗೇಶ್ವರ ದೇವಸ್ಥಾನದ ಈಶ್ವರ ಮಠಪತಿ, ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ಆಹಾರ ಸಾಮಗ್ರಿಯ ವಾಹನಕ್ಕೆ ಪೂಜೆ ಸಲ್ಲಿಸಿ ಅನ್ನದಾಸೋಹ ಸೇವಾ ಸಮಿತಿಯವರನ್ನು ಬೀಳ್ಕೊಟ್ಟರು. ಮೂವತ್ತಕ್ಕೂ ಅಧಿಕ ಸೇವಕರು ಮಹಾದಾಸೋಹದ ಸೇವೆಗಾಗಿ ಶ್ರೀಶೈಲಕ್ಕೆ ತೆರಳಿದರು.

ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ, ಹಿರಿಯರಾದ ಮಹಾಲಿಂಗಪ್ಪ ಲಾತೂರ, ಶ್ರೀಶೈಲ ಮಲ್ಲಿಕಾರ್ಜುನ ಪಾದಯಾತ್ರೆಯ ಸೇವಾ ಸಮಿತಿ ಉಪಾಧ್ಯಕ್ಷ ವಿಷ್ಣುಗೌಡ ಪಾಟೀಲ, ಕಾರ್ಯದರ್ಶಿ ಶಂಕರ ಮುರಗೋಡ, ಖಜಾಂಚಿ ಸಿದ್ರಾಮ ದಲಾಲ, ಸದಸ್ಯರಾದ ವಿಜಯ ಕಂಬಾರ, ಶಿವಾನಂದ ಮಠಪತಿ, ಮಹಾಲಿಂಗ ಗುರವ, ವೀರಭದ್ರಯ್ಯ ಮಠಪತಿ, ಮಹಾಲಿಂಗಪ್ಪ ಪರೀಟ, ಯಲ್ಲಪ್ಪ ಹಟ್ಟಿ, ಶೇಖರ ವಗ್ಗರ, ಸದ್ಭಕ್ತರಾದ ಕಲ್ಲಪ್ಪ ನಜ್ಜರ, ಬಸವರಾಜ ಜೋರಿ, ಶ್ರೀಶೈಲ ಹುಣಶ್ಯಾಳ, ಚನ್ನಪ್ಪ ಮಡಿವಾಳ, ರವಿ ಮುಂಡಗನೂರ, ಶಿವುಗೌಡ ಪಾಟೀಲ, ಪ್ರಕಾಶ ಕಂಬಾರ, ಕರೆಪ್ಪ ಕಪರಟ್ಟಿ, ನಾಗಪ್ಪ ಶಿರೋಳ, ನಾಗಪ್ಪ ಖೋತ, ರಾಘು ಚಿಂಚಲಿ, ಮಲ್ಲಿಕಾರ್ಜುನ ಖಾನಟ್ಟಿ, ಮಾಳಪ್ಪ ಹುಣಸಿಕಟ್ಟಿ, ಆನಂದ ಕಾಗಿ, ರವಿ ಬಿ. ಪಾಟೀಲ, ಮಹಾಲಿಂಗ ಮಾಳಿ, ವಿನೋದ (ಪಪ್ಪು ) ಹುರಕಡ್ಲಿ ಸೇರಿದಂತೆ ಇನ್ನೂ ಹಲವರು ಭಾಗವಹಿಸಿದ್ದರು.

# ಕೃಷ್ಣೆಗೆ ನೀರು ಹರಿಸುವಂತೆ ಶಾಸಕ ಗುಡಗುಂಟಿ ಒತ್ತಾಯ



**ಜಮಖಂಡಿ :** ಬೇಸಿಗೆ ಪ್ರಾರಂಭವಾಗಿದ್ದರಿಂದ ಕೃಷ್ಣಾನದಿ ದಿನದಿಂದ ದಿನಕ್ಕೆ ಖಾಲಿಯಾಗುತ್ತಿದ್ದು ಸರಕಾರ ಮುನ್ನೆಚ್ಚರಿಕೆ ವಹಿಸುವ ಮೂಲಕ ನದಿ ಪಾತ್ರದ ಗ್ರಾಮಗಳ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕೆಂದು ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ ಅವರಿಗೆ ಮನವಿ ಮಾಡಲಾಗಿದೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ನಗರದಲ್ಲಿಸುದ್ದಿಗಾರರೊಂದಿಗೆಮಾತನಾಡಿದಅವರು, ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿಗೆನೀರು ಹರಿಸುವಂತೆ ಮನವರಿಕೆ ಮಾಡಲಾಗಿದೆ. ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ ಕರ್ನಾಟಕ ರಾಜ್ಯ ನೀರಾವರಿ ನಿಗಮ ವ್ಯಾಪ್ತಿಯ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಹಿಪ್ಪರಗಿ ಬ್ಯಾರೇಜ್ನಲ್ಲಿ ಒಟ್ಟು 4.85 ಟಿ.ಎಂ.ಸಿ. ನೀರಿನ ( 27-02-2025 ಕ್ಕೆ ) ಸಂಗ್ರಹವಿದ್ದು, ವ್ಯವಸ್ಥಿತವಾಗಿ ಆದ್ಯತೆ ಮೇರೆಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಕಾಯ್ದಿರಿಸಿ ಬಳಸಿಕೊಳ್ಳಲು ಪ್ರಾದೇಶಿಕ ಆಯುಕ್ತರಿಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಕೃಷ್ಣಾನದಿ ಪಾತ್ರದ ಗ್ರಾಮಗಳ ಜನ ಹಾಗೂ ಜಾನುವಾರುಗಳು ಎದುರಿಸುತ್ತಿರುವ ನೀರಿನ ಸಮಸ್ಯೆಗೆ ಜಲಾಶಯದಲ್ಲಿ ಸಂಗ್ರಹಿಸಲಾದ ನೀರನ್ನು ಹೊರತು ಪಡಿಸಿ ಹೆಚ್ಚುವರಿ ನೀರು ಹರಿಸಿ 2025 ರ ಸಾಲಿನ ಬೇಸಿಗೆ ಅವಧಿಯಲ್ಲಿ ಕೊಯ್ನಾ ಜಲಾಶಯದಿಂದ ನೀರು ಬಿಡಿಸುವಂತೆ ಸಕಾರಾತ್ಮಕವಾಗಿ ಸ್ಪಂದಿಸಿ ಎಪ್ರಿಲ್ ನಿಂದ ಜೂನ ವರೆಗೆ ಅವಶ್ಯವಿದ್ದಲ್ಲಿ ಕೃಷ್ಣಾನದಿ ಪಾತ್ರಕ್ಕೆ ಮಹಾರಾಷ್ಟ್ರ ರಾಜ್ಯದಿಂದ ಅಗತ್ಯ ಕುಡಿಯುವ ನೀರು ಹರಿಸಲು ಭರವಸೆ ನೀಡಿದ್ದಾರೆ ಎಂದರು.

# ಹಾವಿನ ಆಕಾರದಲ್ಲಿ ಮೂರು ಅಡಿ ಉದ್ದ ಬೆಳೆದ ಗೆಣಸಿನ ಗಡ್ಡೆ



**ಮಹಾಲಿಂಗಪುರ :** ಸಮೀಪದ ಸೈದಾಪೂರ ಗ್ರಾಮದ ಈರಪ್ಪ ಎಸ್.ಕೌಜಲಗಿಅವರತೋಟದಲ್ಲಿ ಬೆಳೆದ ಬೃಹತ್ ಗಾತ್ರದ ಗೆಣಸಿನ ಗಡ್ಡೆಯು ಎಲ್ಲರ ಗಮನ ಸೆಳೆದಿದೆ.

ಸಾಮಾನ್ಯವಾಗಿ ಹುಲುಸಾಗಿ ಬೆಳೆದ ಗೆಣಸಿನ ಗಡ್ಡೆಯು ಒಂದು ಅಥವಾ ಒಂದೂವರೆ ಅಡಿ ಬೆಳೆಯುತ್ತದೆ.

ವಿಚಿತ್ರವೆಂದರೆ ಸೈದಾಪೂರದ ಈರಪ್ಪ ಕೌಜಲಗಿ ಅವರ ತೋಟದಲ್ಲಿ ಬೆಳೆದ ಗೆಣಸಿನ ಗಡ್ಡೆಯು ಸುಮಾರು ಮೂರು ಅಡಿಯಷ್ಟು ಉದ್ದವಾಗಿ ಬೆಳೆದಿದೆ. ಜೊತೆಗೆ ನೋಡಲು ಹೆಬ್ಬಾವಿನ ಆಕಾರದಲ್ಲಿ ಬೆಳೆದಿದೆ ಎನ್ನುವದು ವಿಶೇಷ. ಈ ಅಪರೂಪದ ಗೆಣಸಿನ ಗಡ್ಡೆಯು ಸುತ್ತಮುತ್ತಲಿನ ತೋಟದ ರೈತರ ಗಮನ ಸೆಳೆಯಿತು. ಭೂಮಿಯ ಒಳಭಾಗದಲ್ಲಿ ಬೆಳೆಯುವ ಗೆಣಸಿನ ಗಡ್ಡೆಯು ಹಾವಿನ ಆಕಾರದಲ್ಲಿ ಮೂರ ಅಡಿಗೂ ಅಧಿಕ ಉದ್ದ ಬೆಳೆದಿರುವದು ಪ್ರಕೃತಿಯಲ್ಲಿನ ಅಚ್ಚರಿಗೆ ಸಾಕ್ಷಿಯಾಗಿದೆ ಎನ್ನಬಹುದು.

# ದೆಹಲಿ ಚಲೋದಲ್ಲಿ ಬಾದಾಮಿ ಪ್ರತಿನಿಧಿಗಳು ಭಾಗಿ: ವಿವಿದ ಬೇಡಿಕೆಗಳ ಈಡೇರಿಕೆಗೆ ಮನವಿ ಸಲ್ಲಿಕೆ




**ಬಾದಾಮಿ :** ದೆಹಲಿಯ ರಾಮಲೀಲಾ ಮೈದಾನದಲ್ಲಿ ಬುಧವಾರ ನಡೆದ ಅಖಿಲ ಭಾರತೀಯ ಪ್ರತಿನಿಧಿಗಳ ಕ್ಷೇಮಾಭಿವೃದ್ಧಿ ಸಂಘದ "ದೆಹಲಿ ಚಲೋ" ಧರಣಿಯಲ್ಲಿ ಪ್ರತಿನಿಧಿಗಳ ಬೇಡಿಕೆಗಳನ್ನು ಈಡೇರಿಸಲು ಬಾದಾಮಿ ಶಾಖೆಯ ಪ್ರತಿನಿಧಿಗಳು ಭಾಗವಹಿಸಿದ್ದರು.

ಬಾದಾಮಿ ಶಾಖೆಯ ಅಧ್ಯಕ್ಷ ಎಸ್.ಪಿ.ತೆಗ್ಗಿನಮನಿ, ಕಾರ್ಯದರ್ಶಿ ಎಸ್.ಜಿ.ಜಾಲಿಹಾಳ, ಉಪಾಧ್ಯಕ್ಷ ವಿ.ಎಸ್.ಪಾರ್ವತಿಮಠ, ಖಜಾಂಚಿ ಐ.ಎಂ.ಮುಲ್ಲಾನವರ, ಬೆಳಗಾವಿ ವಿಭಾಗದ ಸಹಕಾರ್ಯದರ್ಶಿ ಎಂ.ಎಂ.ರೇಶ್ಮಿ ಹಾಗೂ ಸಂಘಟನೆಯ ಪ್ರಮುಖರಾದ ಎಸ್.ಎನ್.ಪರುತಿ, ಎಂ.ಎಸ್.ಮೆಣಸಿನಕಾಯಿ, ಎಸ್.ಡಿ.ಯಲಿಗಾರ, ಪ್ರಕಾಶ ಬೀಳಗಿ, ನಾಗೇಶ ಮುರುಗೋಡ, ಮಂಜುನಾಥ ಅಂಬಿಗೇರ, ಹಣಮಂತ ಬಂಡಿವಡ್ಡರ, ಅರವಿಂದ ಜೋಶಿ ಪಾಲ್ಗೊಂಡಿರುತ್ತಾರೆ ಹಾಗೂ ದೇಶದಾದ್ಯಂತ ಸುಮಾರು 1 ಲಕ್ಷಕ್ಕೂ ಹೆಚ್ಚು ಪುರುಷ ಹಾಗೂ ಮಹಿಳಾ ಪ್ರತಿನಿಧಿಗಳು ಈ ಧರಣಿಯಲ್ಲಿ ಪಾಲ್ಗೊಂಡಿದ್ದರು. ಪ್ರತಿನಿಧಿಗಳ ಬೇಡಿಕೆಗಳನ್ನು ಈಡೇರಿಸಲು ಸರ್ಕಾರಕ್ಕೂ ಹಾಗೂ ಎಲ್.ಐ.ಸಿ. ಸಂಸ್ಥೆಗೂ ಮನವಿಯನ್ನು ಧರಣಿಯ ಮುಖಾಂತರ ಸಲ್ಲಿಸಲಾಯಿತು.

# ವಿದ್ಯಾರ್ಥಿಗಳಲ್ಲಿ ಕಾನೂನುಗಳ ಅರಿವು ಮುಖ್ಯ



**ರಬಕವಿ-ಬನಹಟ್ಟಿ :** ವಿದ್ಯಾರ್ಥಿಗಳಿಗೆ ಹೊಸ ಕಾನೂನುಗಳ ಬಗ್ಗೆ ತಿಳಿಸಿಕೊಡುವುದರ ಜೊತೆಗೆ ಸಮಾಜದಲ್ಲಿ ಅವುಗಳ ಬಗ್ಗೆ ಅರಿವು ಮೂಡಿಸಬೇಕು ಎಂದು ಸ್ಥಳೀಯ ಪಿಎಸ್ಐ ಶಾಂತಾ ಹಳ್ಳಿ ತಿಳಿಸಿದರು.

ಅವರು ಮಂಗಳವಾರ ಇಲ್ಲಿನ ಎಸ್. ಟಿ. ಸಿ. ಕಾಲೇಜಿನಲ್ಲಿ ಹಮ್ಮಿಕೊಂಡ ಹೊಸ ಕಾನೂನಗಳ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದರು.

ಪೊಲೀಸ್ ಸಹಾಯವಾಣಿಗಾಗಿ 112 ಕ್ಕೆ, ಮಕ್ಕಳ ಸಹಾಯವಾಣಿ 1098 ಕ್ಕೆ ಮತ್ತು ಸೈಬರ್ ವಂಚನೆಯ ಸಹಾಯವಾಣಿಗಾಗಿ 1930 ಕರೆ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸೈಬರ್ ವಂಚನೆಗಳು ನಡೆಯುತ್ತಿವೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಹೆಚ್ಚು ಜಾಗೃತಿಯಿಂದ ಇರಬೇಕು. ಮೊಬೈಲ್ ಗಳಲ್ಲಿ ಬರುವ ಅಪರಿಚಿತ ಕರೆಗಳಿಗೆ ಮತ್ತು ಸಂದೇಶಗಳಿಗೆಯಾವುದೇವೈಯಕ್ತಿಕಮಾಹಿತಿಗಳನ್ನು ನೀಡಬೇಡಿ. ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ, ಶಾಲಾ ಕಾಲೇಜುಗಳಲ್ಲಿ ನಡೆಯುವ ರ್ಯಾಗಿಂಗ್ ಕುರಿತು ಪೊಲೀಸ್ ರಿಗೆ ಕೂಡಲೇ ಮಾಹಿತಿಯನ್ನು ನೀಡಬೇಕು. ಭಾರತೀಯ ನ್ಯಾಯ ಸಂಹಿತೆ ಮತ್ತು ಭಾರತೀಯ ನ್ಯಾಯ ಸುರಕ್ಷತಾ ಸಂಹಿತೆ ಕಾನೂನಗಳ ಬಗ್ಗೆ ಎಲ್ಲರಿಗೂ ಅರಿವು ಇರುವುದು ಮುಖ್ಯ ಎಂದರು.

ಪ್ರಾಚಾರ್ಯ ಜಿ. ಆರ್. ಜುನ್ನಾಯ್ಕರ್, ಉಪನ್ಯಾಸಕರಾದ ಮನೋಹರ ಶಿರಹಟ್ಟಿ, ಸುನಂದಾ ಭಜಂತ್ರಿ, ವಿ. ವೈ. ಪಾಟೀಲ, ರತ್ನಾ ಪಾಟೀಲ, ವಿಶ್ವಜ ಕಾಡದೇವರ ಉಪಸ್ಥಿತರಿದ್ದರು.

# ಮೃತ್ಯುಂಜಯ ರಾಮದುರ್ಗ ಅವರಿಗೆ ಕನ್ನಡ ಸಿರಿ ಪ್ರಶಸ್ತಿ



**ರಬಕವಿ-ಬನಹಟ್ಟಿ :** ರಬಕವಿಯ ಹಿರಿಯ ಸಾಹಿತಿ, ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ರಬಕವಿ-ಬನಹಟ್ಟಿ ತಾಲೂಕಾ ಅಧ್ಯಕ್ಷರಾದ ಮೃತ್ಯುಂಜಯ ರಾಮದುರ್ಗ ಅವರಿಗೆ ಜಿಲ್ಲಾ ಕನ್ನಡ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಬದಾಮಿ ತಾಲೂಕಿನ ನೀರಬೂದಿಹಾಳ ಗ್ರಾಮದಲ್ಲಿ ನಡೆದ ಬಾಗಲಕೋಟೆ ಜಿಲ್ಲಾ ಹನ್ನೆರಡನೇ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೆಯ ದಿನ ಭಾನುವಾರ ಸಂಜೆ ವಿಧಾನ ಪರಿಷತ್ತಿನ ಸದಸ್ಯ ಹನಮಂತ ನಿರಾಣಿ, ಕಸಾಪ ಜಿಲ್ಲಾ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಪ್ರಶಸ್ತಿ ಫಲಕ, ಸನ್ಮಾನ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ರಬಕವಿ-ಬನಹಟ್ಟಿ ತಾಲೂಕಾ ಕಸಾಪ ಅಧ್ಯಕ್ಷ ಮ. ಕೃ. ಮೇಗಾಡಿ, ಗೌರವ ಕಾರ್ಯದರ್ಶಿ ಶ್ರೀಶೈಲ ಬುರ್ಲಿ, ಮಹಾಲಿಂಗಪುರ ಕಸಾಪ ಅಧ್ಯಕ್ಷ ಬಸವರಾಜ ಮೇಟಿ, ಹಿರಿಯ ಸಾಹಿತಿ ಶಿವಾನಂದ ದಾಶಾಳ, ಕಲಾವಿದ ಶ್ರೀಶೈಲ ಪಟ್ಟಣಶೆಟ್ಟಿ, ಕಸಾಪ ಜಿಲ್ಲಾ ಮಹಿಳಾ ಪ್ರತಿನಿಧಿ ದಾಕ್ಷಾಯಣಿ ಮಂಡಿ ಉಪಸ್ಥಿತರಿದ್ದರು. ಸಮ್ಮೇಳನದ ಸರ್ವಾಧ್ಯಕ್ಷರಾದ ವಾಯ್. ಎಂ. ಯಾಕೊಳಿ ಅವರನ್ನು ರಬಕವಿ-ಬನಹಟ್ಟಿ ತಾಲೂಕಾ ಕಸಾಪ ವತಿಯಿಂದ ಹಾರ್ದಿಕವಾಗಿ ಸನ್ಮಾನಿಸಲಾಯಿತು.

# ವಿದ್ಯಾರ್ಥಿಗಳಿಗೆ ಕಾನೂನು ಅರಿವು ಅಗತ್ಯ: ಕಿರಣ ಸತ್ತಿಗೇರಿ



**ಮಹಾಲಿಂಗಪುರ:** ವಿದ್ಯಾರ್ಥಿಗಳಿಗೆ ಇಂದು ಕಾನೂನು ಅರಿವು ಅಗತ್ಯವಾಗಿದೆ. ವಾಹನ ಚಲಾಯಿಸುವಾಗ ಕಡ್ಡಾಯವಾಗಿ ಹೆಲ್ಮೇಟ್ ಧರಿಸಿ, ಅಮೂಲ್ಯವಾದ ಜೀವಗಳನ್ನು ಕಾಪಾಡಿಕೊಳ್ಳಿ ಎಂದು ಸ್ಥಳೀಯ ಠಾಣಾಧಿಕಾರಿ ಕಿರಣ ಸತ್ತಿಗೇರಿ ಹೇಳಿದರು.

ಪಟ್ಟಣದಕೆಎಲ್ಇಸಂಸ್ಥೆಯಎಸ್ಸಿಪಿಪದವಿಕಾಲೇಜಿನ ರಾಜ್ಯಶಾಸ್ತ್ರ ವಿಭಾಗ ಹಾಗೂ ಪೊಲೀಸ್ ಠಾಣೆ ಸಹಯೋಗದಲ್ಲಿ ಹೊಸ ಅಪರಾಧ ಕಾನೂನುಗಳು ಎಂಬ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದಅವರುಸಮಾಜದಲ್ಲಿಇತ್ತೀಚೆಗೆಸಾಕಷ್ಟು ಜನ ಉದ್ಯೋಗ ಪಡೆದುಕೊಳ್ಳುವ ಭರದಲ್ಲಿ ಮೋಸ ಹೋಗುತ್ತಿದ್ದಾರೆ. ಹಲವು ಆಮಿಷಗಳಿಗೆ ಒಳಗಾಗಿ ಹಣ ಮತ್ತು ಜೀವವನ್ನು ಕಳೆದುಕೊಳ್ಳುತ್ತಿದ್ದಾರೆ. ಅಂತಹ ಸಂದರ್ಭದಲ್ಲಿ ತಕ್ಷಣವೇ ಠಾಣೆಗೆ ದೂರು ನೀಡಿದರೆ ಅಪರಾಧಿಗಳನ್ನು ಬಂಧಿಸುತ್ತೇವೆ ಎಂದರು.

ಅಪರಾಧ ವಿಭಾಗದ ಎಸ್ಸೈ ಮಧು ಬೀಳಗಿ ಮಾತನಾಡಿ, ತಂತ್ರಜ್ಞಾನದ ಅಭಿವೃದ್ಧಿಯಿಂದ ಬಹಳ ಬದಲಾವಣೆಗಳು ಬಂದಿವೆ. ಕಾನೂನಿನಲ್ಲಿ ಸ್ವಲ್ಪ ಬದಲಾವಣೆಗಳನ್ನು ತಂದಿದ್ದಾರೆ. ಯುವಕರು ಮತ್ತು ವಿದ್ಯಾರ್ಥಿಗಳು ಸೈಬರ್ ಅಪರಾಧಗಳಿಂದ ದೂರವಿರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ. ಸುನಂದಾ ಸೋರಗಾಂವಿ ಮಾತನಾಡಿನಮ್ಮಮಹಾವಿದ್ಯಾಲಯದಲ್ಲಿಸಂವಿಧಾನ ಜಾಗೃತಿಯ ಕುರಿತು ಸಾಕಷ್ಟು ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿದೆ. ವಿದ್ಯಾರ್ಥಿಗಳು ಸಂವಿಧಾನ ಹಾಗೂ ಕಾನೂನುಗಳನ್ನು ಅರಿತುಕೊಳ್ಳಬೇಕು ಎಂದರು.

ಹೊಸ ಅಪರಾಧ ಕಾನೂನುಗಳು ಎಂಬ ಜಾಗೃತಿ ವಿಷಯದ ಪ್ರಬಂಧ ಸ್ಪರ್ಧೆಯಲ್ಲಿ 146 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂಗೀತಾ ತೇಲಿ ಪ್ರಥಮ, ದಾನಮ್ಮ ಪೂಜಾರಿ ದ್ವಿತೀಯ, ಸ್ವಾತಿ ಪಾಲಭಾಂವಿ ಮತ್ತು ಪ್ರಿಯಾಂಕ ಕಾಂಬಳೆ ತೃತೀಯ ಸ್ಥಾನ ಪಡೆದರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಅಭಯ ಉಗಾರೆ, ಡಾ. ಸುಭಾಸ ಬಿಜ್ಜರಗಿ, ಪ್ರೊ. ಎಸ್. ಎಸ್. ಮುಗಳ್ಯಾಳ, ಶಂಕರ ಪಾಟೀಲ, ಬಸವರಾಜ ಪಾಗದ, ಸಿ. ಎಂ. ಐಗಳಿ, ಪಿ. ಎಸ್. ಹಿಪ್ಪರಗಿ, ಪಿ. ಎಮ್. ಗೌಳಿ, ಸಿ. ಎಮ್. ಗೆಣ್ಣೂರ, ಎಸ್. ಎಸ್. ಕೋಡಗಾನೂರ ಸೇರಿದಂತೆ ಎಲ್ಲಾ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಬಾಗಲಕೋಟೆ-ಕುಡಚಿ ರೇಲ್ವೆ ಕಾಮಗಾರಿ

# ಭೂ-ಸ್ವಾಧೀನಕ್ಕಾಗಿ ಅಧಿಕಾರಿಗಳ ಹಾಗೂ ರೈತರ ಸಭೆ



**ತೇರದಾಳ :** ಈಗಾಗಲೇ ಸರಕಾರ ರೈತರಿಗೆ ನೀಡುವ ಪರಿಹಾರ ಕುರಿತು ರೈತರ ಹಾಗೂ ಸರಕಾರದ ಮಧ್ಯೆ ಪ್ರಕರಣ ಹೈಕೋರ್ಟಿನ ಮೆಟ್ಟಿಲೇರಿದ್ದು, ಅಲ್ಲಿ ಪ್ರಕರಣದ ಚೌಕಾಶಿ ನಡೆಯುತ್ತಿದೆ. ಹೀಗಿರುವಾಗ ಕೋರ್ಟಿನಲ್ಲಿರುವ ಸರ್ವೇ ನಂಬರಗಳ ಜಮೀನನ್ನು ಅದು ಹೇಗೆ ಭೂ ಸ್ವಾಧೀನ ಮಾಡಿಕೊಳ್ಳುತ್ತೀರಿ ? ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥ ಆಗುವವರೆಗೆ ಹೀಗೆಯೇ ಮುಂದುವರೆಯಲಿ ಎಂದು ತೇರದಾಳ ಹಾಗೂ ಸಸಾಲಟ್ಟಿ ಭಾಗದ ರೈತರು ಜಮಖಂಡಿ ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ ಎದುರು ಸ್ಪಷ್ಟವಾಗಿ ಹೇಳಿದರು.

ಮಂಗಳವಾರ ಇಲ್ಲಿನ ಪುರಸಭೆ ಸಭಾಭವನದಲ್ಲಿ ಜರುಗಿದ ಬಾಗಲಕೋಟೆ ಕುಡಚಿ ರೇಲ್ವೆ ಕಾಮಗಾರಿಗೆ ಹೆಚ್ಚುವರಿ ಭೂ ಸ್ವಾಧೀನ ಕುರಿತು ತೇರದಾಳ ಹಾಗೂ ಸಸಾಲಟ್ಟಿ ಗ್ರಾಮದ ರೈತರ ಹಾಗೂ ಅಧಿಕಾರಿಗಳ ಸಭೆಯಲ್ಲಿ ರೈತರು ಅಧಿಕಾರಿಗಳಿಗೆ ಹೇಳಿದರು.

ರೈತರ ಜಮೀನುಗಳಲ್ಲಿ ರೇಲ್ವೆ ಇಲಾಖೆ ಅಧಿಕಾರಿಗಳು ಗುರುತಿನ ಕಲ್ಲುಗಳನ್ನು ಹಾಕುತ್ತಿದ್ದಾರೆ. ಆದರೆ ಈ ಬಗ್ಗೆ ರೈತರಿಗೆ ಯಾವುದೇ ಮಾಹಿತಿ ಇಲ್ಲ. ಇನ್ನು ಸರ್ವೇ ಅಧಿಕಾರಿಗಳೂ ಕೂಡ ಸ್ಪಂಧಿಸುವುದಿಲ್ಲ. ರೈತರಿಗೆ ಮರ್ಯಾದೆ ಅನ್ನುವುದು ಇಲ್ಲವೇ ? ಭೂಮಿ ಸ್ವಾಧೀನ ಮಾಡಿಕೊಳ್ಳುವದಿದ್ದರೆ ಏನು ಬೇಕಾದರೂ ಮಾಡಬಹುದೆ ಎಂದು ರೈತರು ಅಧಿಕಾರಿಗಳ ಮುಂದೆ ತಮ್ಮ ತೀವ್ರ ಅಸಮಾಧಾನ ತೋಡಿಕೊಂಡರು.

ಅಣ್ಣ-ತಮ್ಮ ಜಮೀನಿನ ಆಸ್ತಿಯಲ್ಲಿ ಬೇರೆ ಮಾಡಿಕೊಳ್ಳಬೇಕಾದರೆ ಮೊದಲು ಪೋಡಿ ಆಗಬೇಕು. ಆದರೆ ಪೋಡಿ ಆಗದೆ ನೀವು ಭೂ ಸ್ವಾಧೀನ ಹೇಗೆ ಮಾಡಿಕೊಳ್ಳುತ್ತೀರಿ. ಹೀಗೆ ಮಾಡಲು ಕಾನೂನಿನಲ್ಲಿ ಅವಕಾಶವಿದೆಯೇ. ಪೋಡಿಯಾಗದೆ ನಮ್ಮ ಜಮೀನು ಹೇಗೆ ತಗೆದುಕೊಂಡಿದ್ದೀರಿ ಎಂದು ರೈತ ರಮೇಶ ಕಿತ್ತೂರ ಪ್ರಶ್ನಿಸಿದರು.

ಅಕ್ಕ-ಪಕ್ಕದ ಜಮೀನುಗಳನ್ನು ಭೂ ಸ್ವಾಧೀನ ಮಾಡಿಕೊಳ್ಳಲಾಗುತ್ತಿದೆ. ಆದರೆ ಮಧ್ಯ ಇರುವ ನಮ್ಮ ಜಮೀನು ಮಾತ್ರ ಸ್ವಾಧೀನ ಕುರಿತು ನೋಟೀಸ್ ಕೂಡ ಬಂದಿಲ್ಲ. ಸ್ವಾಧೀನ ಮಾಡಿಕೊಳ್ಳುತ್ತಿರೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಮಾಹಿತಿ ನೀಡುವಂತೆ ಸರ್ವೇ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ವರ್ಷಗಳೇ ಕಳೆದರೂ ಇದುವರೆಗೆ ಮಾಹಿತಿ ನೀಡಿಲ್ಲ ಎಂದು ಭೂಪಾಲ ಮಾಲಗಾಂವಿಯ ಪ್ರಶ್ನೆಗೆ ಅಧಿಕಾರಿಗಳು ದಂಗಾದರು. ಬಾಗಲಕೋಟೆ ಕುಡಚಿ ರೇಲ್ವೆ ಕಾಮಗಾರಿಗಾಗಿ ರೇಲ್ವೆ ಇಲಾಖೆ ಹೆಚ್ಚುವರಿ ಜಮೀನು ಭೂಸ್ವಾಧೀನಕ್ಕೆ ರೈತರ ಜಮೀನುಗಳ ಸರ್ವೇ ನಂಬರ ಗುರುತಿಸಿವೆ. ಇದು ಪ್ರಾಥಮಿಕ ವರದಿ ಆಗಿರುತ್ತದೆ. ಈಗ ರೇಲ್ವೆ ಇಲಾಖೆ ಗುರುತಿಸಿದ ಜಾಗದಲ್ಲಿ ಕಲ್ಲು ಹಾಕಲು ರೈತರು ಅನುಮತಿ ನೀಡಿದರೆ ರೈತರ ಒಪ್ಪಿಗೆ ವರದಿಯನ್ನು ಸರಕಾರಕ್ಕೆ ಕಳುಹಿಸಲಾಗುವುದು. ಸರಕಾರ ಸೂಚಿಸಿದ ಬಳಿಕ ಭೂ ಸ್ವಾಧೀನ ಪ್ರಕ್ರಿಯೆ ನಡೆಯುತ್ತದೆ ಎಂದು ಉಪವಿಭಾಗಾಧಿಕಾರಿ ಶ್ವೇತಾ ಬೀಡಕರ ರೈತರಿಗೆ ಮಾಹಿತಿ ನೀಡಿದರು.

ಈಗಾಗಲೇ ನ್ಯಾಯಾದಯಲ್ಲಿರುವ ಸರ್ವೇ ನಂಬರಗಳಲ್ಲಿಯೇ ಮತ್ತೆ ಹೆಚ್ಚುವರಿ ಭೂಮಿ ಸ್ವಾಧೀನ ಮಾಡಿಕೊಳ್ಳಲು ಮುಂದಾಗಿದ್ದೀರಿ. ಇದು ಹೇಗೆ ಸಾಧ್ಯ. ನ್ಯಾಯಾಲಯದಲ್ಲಿ ಪ್ರಕರಣ ಮೊದಲು ಇತ್ಯರ್ಥಗೊಳ್ಳಲಿ. ಅಲ್ಲಿಯವರೆಗೆ ಭೂ ಸ್ವಾಧೀನ ಪ್ರಕ್ರಿಯೆ ಬೇಡ ಎಂದು ರೈತರು ಒಕ್ಕೊರಲಿನಿಂದ ಹೇಳಿದರು. ಅಲ್ಲದೆ ಮೊದಲಿನ ಅವಾರ್ಡ್ಗೆ ನ್ಯಾಯಾಲಯ ಪರಿಹಾರದ ಕುರಿತು ಆದೇಶ ಮಾಡಿದಾಗ ಸರಕಾರ ಅಧಿಸೂಚನೆ ಹೊರಡಿಸಬೇಕಿತ್ತು. ದ್ವಿಪೀಠಕ್ಕೆ ಏಕೆ ಹೋಗಿದ್ದೀರಿ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ನ್ಯಾಯಾಲಯದ ತೀರ್ಪು ಆಗುವವರೆಗೆ ಸ್ವಾಧೀನ ಪ್ರಕ್ರಿಯೆ ಬೇಡ ಎಂದು ಮಹೇಶ ಕಾಲತಿಪ್ಪಿ, ಅಲ್ಲಪ್ಪ ಮದಲಮಟ್ಟಿ, ಮಾಲಗಾಂವಿ, ಸುರೇಶ ಕಾಲತಿಪ್ಪಿ, ಮಗದುಮ್, ಪ್ರವೀಣ ಅವರಾದಿ ಇನ್ನಿತರ ರೈತರ ಹಕ್ಕೆ ಅಧಿಕಾರಿಗಳು ಸಭೆಯನ್ನು ಮೊಟಕುಗೊಳಿಸಿ ತೆರಳಿದರು. ತಹಶೀಲ್ದಾರ್ಗಳಾದ ಗಿರೀಶ ಸ್ವಾದಿ, ವಿಜಯಕುಮಾರ ಕಡಕೋಳ, ರೇಲ್ವೆ ಇಲಾಖೆಯ ನಾರಾಯಣ, ಎಡಿಎಲ್ಆರ್, ಉಪ ತಹಶೀಲ್ದಾರ್ ಶ್ರೀಕಾಂತ ಮಾಯನ್ನವರ, ಕಂದಾಯ ನಿರೀಕ್ಷಕ ಪಿ. ಆರ್. ಮಠಪತಿ ಮತ್ತಿತರರು ಉಪಸ್ಥಿತರಿದ್ದರು.

# ಉಪ ವಿಭಾಗಾಧಿಕಾರಿಗೆ ಲಯನ್ಸ್ ಸಂಸ್ಥೆಯಿಂದ ಮನವಿ




**ಜಮಖಂಡಿ :** ಬಾಗಲಕೋಟ ವಿಶ್ವವಿದ್ಯಾಲಯವನ್ನು ವಿಲೀನಗೊಳಿಸುವ ಪ್ರಯತ್ನ ಕೈ ಬಿಡಬೇಕೆಂದು ಒತ್ತಾಯಿಸಿ ಲಯನ್ಸ್ ಸಂಸ್ಥೆ ಸದಸ್ಯರು ಕಂದಾಯ ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ ಅವರಿಗೆ ಮನವಿ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಲಯನ್ಸ ಸಂಸ್ಥೆ ಅಧ್ಯಕ್ಷ ಚಿನ್ಮಯ ಜಿರ್ಲಿ, ನಾಡೋಜ ಡಾ. ಹೆಚ್. ಜಿ. ದಡ್ಡಿ, ಡಾ. ಸಿದ್ಧೇಶ್ವರ ಕಮತೆ, ರಮೇಶ ಕೋರಿ, ಅರ್ಬನ್ ಬ್ಯಾಂಕ ನಿರ್ದೇಶಕ ಪ್ರಭು ಜನವಾಡ, ಚಿದಾನಂದ ಚಟ್ಟೇರ, ವಿಜಯ ಕಟಗಿ, ಪ್ರೊ. ಗದ್ಯಾಳ ಉಪಸ್ಥಿತರಿದ್ದರು.

## ಮರಣೋತ್ತರ ಪರೀಕ್ಷೆ ವರದಿ ಅನ್ವೇಷಣೆಗೆ ಸಹಕಾರಿ: ಡಾ. ಬಣ್ಣದ




**ಜಮಖಂಡಿ :** ಅಪರಾಧಿಕ ಪ್ರಕರಣಗಳಲ್ಲಿ ಮರಣೋತ್ತರ ಪರೀಕ್ಷೆ ವರದಿ ಮತ್ತು ವಿಧಿವಿಜ್ಞಾನ ವರದಿ ಅನ್ವೇಷಣೆಗೆ ಸಹಾಯಕಾರಿಯಾಗುವ ಮೂಲಕ ಹಲವು ಅಂಶಗಳನ್ನು ತನಿಖಾಧಿಕಾರಿಗಳಿಗೆ ಲಭಿಸುತ್ತವೆ ಎಂದು ಉಪ ವಿಭಾಗೀಯ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಕೆ. ಕೆ. ಬಣ್ಣದ ಹೇಳಿದರು.

ನಗರದ ಬಿ.ಎಲ್.ಡಿ.ಇ.ಸಂಸ್ಥೆಯ ಕಾನೂನು ಮಹಾವಿದ್ಯಾಲಯದ ಐ.ಕ್ಯೂ.ಎ.ಸಿ. ಅಡಿಯಲ್ಲಿ ಜರುಗಿದ ಮರಣೋತ್ತರ ಪರೀಕ್ಷೆ ವರದಿ ಹಾಗೂ ವಿಧಿವಿಜ್ಞಾನ ವರದಿಯ ಪಾತ್ರ ಹಾಗೂ ಮಹತ್ವದ ಕುರಿತು ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಭಿಯೋಜನೆಗೆ ಸುಸಂಬದ್ಧವಾದ ಸಾಕ್ಷ್ಯಗಳನ್ನು ನೀಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅಪರಾಧ ಕೃತ್ಯಗಳ ಸಾಬೀತು ಮಾಡುವಲ್ಲಿ, ತನಿಖೆಯಲ್ಲಿ ವಿಶೇಷ ಕುರುಹುಗಳನ್ನು ನೀಡಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ನಿಖಿಲ ಮಂಟೂರ ಮಾತನಾಡಿದರು. ವೇದಿಕೆಯಲ್ಲಿ ಐ.ಕ್ಯೂ.ಎ.ಸಿ. ಸಂಯೋಜಕ ಡಾ. ಸಖದೇವ ಗಸ್ತಿ ಸಹಿತ ಹಲವರು ಹಾಜರಿದ್ದರು.

ಅಕ್ಷಮ್ಮಾ ಗುದಿಗೆನ್ನವರ ಪ್ರಾರ್ಥಿಸಿದರು. ಸುರೇಶ ಕೋಳಿಗುಡ್ಡ ಸ್ವಾಗತಿಸಿದರು. ಡಾ. ಶ್ರೀದೇವಿ ಸುವರ್ಣಖಂಡಿ ಮತ್ತು ರಾಜಶೇಖರ ಹೊಸಟ್ಟಿ ಸೊಗಸಾಗಿ ನಿರೂಪಿಸಿದರು. ಎಸ್. ಎಸ್. ಸಲಗರ ವಂದಿಸಿದರು.

## ಹಳೆ ವಿದ್ಯಾರ್ಥಿನಿಯರಿಂದ ಕಲಿತ ಶಾಲೆಗೆ 50 ಸಾವಿರ ದೇಣಿಗೆ



**ಜಮಖಂಡಿ :** ನಗರದ ಬಾಲಕಿಯರ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ 1985-86 ನೇ ಸಾಲಿನ ಹಳೆ ವಿದ್ಯಾರ್ಥಿನಿಯರಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮೇಳನ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು.

ಕಲಿಕಾ ಅವಧಿಯಲ್ಲಿ ಶಿಕ್ಷಕರಾಗಿದ್ದ ಬಿ. ಎಸ್. ಬುಟ್ಟನ್ನವರ,ಲಲಿತಾ ಕೋಟ್ಯಾಳಕರ,ಕೆ.ಎನ್.ಟಕಾಳೆ, ಬಿ. ಎಚ್. ಹೊನವಾಡ, ವೈ. ವಿ. ದುಡ್ಯಾಳ, ಎಸ್. ಜಿ. ಮುಲ್ಲಾ, ಬಿ. ಎ. ಅಂಗಡಿ, ಎಂ. ಡಿ. ಕುಂಬಾರ, ಸಿ. ಎಸ್. ಝಳಕಿ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು. ನಿವೃತ್ತ ಶಿಕ್ಷಕಿ ಲಲಿತಾ ಕೋಟ್ಯಾಳಕರ ಮಾತನಾಡಿದರು. ವೇದಿಕೆಯಲ್ಲಿ ಉಪ ಪ್ರಾಂಶುಪಾಲ ಮಹಾಂತೇಶ ನರಸನ್ನವರ ಸಹಿತ ಹಲವರು ಉಪಸ್ಥಿತರಿದ್ದರು.

ಹಳೆ ವಿದ್ಯಾರ್ಥಿನಿಯರಾದ ಜಯಾ ಕಡಪಟ್ಟಿ, ಗಂಗೂ ಮುನ್ನೋಳ್ಳಿ, ಮಹಾನಂದಾ ಧರೇಗೌಡರ, ನಳಿನಿ ಅಂಬಲಿ, ಮಹಾನಂದಾ ತೆಲಬಕ್ಕನವರ, ಅನಿತಾ ಮಾದನಶೆಟ್ಟಿ, ಜಗದೇವಿ ಕೊಂಡಗೂಳಿ, ಸುಲಭಾ ಪವ9ತಿಕರ, ರಮೀಜಾ ಸೋಲಾಪುರ, ರೂಪಾ ಸಬರದ, ಸುಶೀಲಾ ಔರಾದಿ, ಸವಿತಾ ಹಜಾರೆ, ವಿಜಯಾ ಹೊಸಟ್ಟಿ, ಶ್ರೀದೇವಿ ಸಿದ್ದಾಪೂರ ಮುಂತಾದವರು ಭಾಗವಹಿಸಿದ್ದರು.

ಹಳೆ ವಿದ್ಯಾರ್ಥಿನಿಯರ ಬಳಗದ ವತಿಯಿಂದ ಕಲಿತ ಶಾಲೆಗೆ ಐವತ್ತು ಸಾವಿರ ರೂ. ಮೌಲ್ಯದ ಕಾಣಿಕೆಗಳನ್ನು ಶಾಲೆಗೆ ದೇಣಿಗೆ ರೂಪದಲ್ಲಿ ನೀಡಿದರು.

## ರಾಣಿ ಚೆನ್ನಮ್ಮ ವಿವಿಗೆ ಪ್ರಥಮ ಸ್ಥಾನ ಪಡೆದ ಜಬೀನಾ ಫಣಿಬಂದ್



**ಮಹಾಲಿಂಗಪುರ :** ಪಟ್ಟಣದ ಕುಮಾರಿ ಜಬೀನಾ ರಮ್ಜಾನಸಾಬ ಫಣಿಬಂದ ಬಿಬಿಎ ವಿಭಾಗದಲ್ಲಿ ಪ್ರತಿಶತ 91.88 ಅಂಕಗಳನ್ನು ಪಡೆದು ಬೆಳಗಾವಿಯ ರಾಣಿ ಚೆನ್ನಮ್ಮ ವಿವಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

2021 ರಿಂದ 2024 ರವರೆಗೆ ಜಮಖಂಡಿ ಬಿಎಲ್ಡಿಇ ವಿಜ್ಞಾನ ಕಾಲೇಜಿನಲ್ಲಿ ಬಿಬಿಎ ಅಧ್ಯಯನ ಮಾಡಿರುವ ಜಬೀನಾ ಪರೀಕ್ಷೆಯಲ್ಲಿ 4200 ಅಂಕಗಳ ಪೈಕಿ 3859 ಅಂಕಗಳನ್ನು ಪಡೆದು ಚೆನ್ನಮ್ಮ ವಿವಿಗೆ ರ್ಯಾಂಕ್ ಬಂದಿದ್ದಾಳೆ. ತಂದೆ ರಮ್ಜಾನಸಾಬ ಸೈಕಲ್ ರಿಪೇರಿ ಮಾಡುವ ಸಣ್ಣ ಅಂಗಡಿ ಹೊಂದಿದ್ದು, ಕಡುಬಡತನದಲ್ಲಿಯೂ ಕಷ್ಟಪಟ್ಟು ಮಗಳಿಗೆ ವಿದ್ಯಾಭ್ಯಾಸ ಕೊಡಿಸಿದ್ದಾರೆ. ಜಬೀನಾ ಪಟ್ಟಣದ ಪ್ರಗತಿ ಶಾಲೆಯಲ್ಲಿ ಪ್ರಾಥಮಿಕ ಮತ್ತು ಕೆಎಲ್ಇ ಎಸ್ಪಿಪಿ ಶಾಲೆಯಲ್ಲಿ ಪ್ರೌಢ ಶಿಕ್ಷಣ ಮುಗಿಸಿದ್ದಾಳೆ. ಸದ್ಯ ಪ್ರಗತಿ ಪ್ರೌಢ ಶಾಲೆಯಲ್ಲಿ ಅತಿಥಿ ಶಿಕ್ಷಕಿಯಾಗಿ ( ಇಂಗ್ಲೀಷ್ ) ಕಾರ್ಯ ನಿರ್ವಹಿಸುತ್ತಿದ್ದಾಳೆ. ಭವಿಷ್ಯದಲ್ಲಿ ಸ್ಪರ್ಧಾತ್ಮಕ ವಿಷಯಗಳ ಅಧ್ಯಯನ ಮಾಡಿ ಸರ್ಕಾರಿ ಮಟ್ಟದ ಉನ್ನತ ಹುದ್ದೆಯನ್ನು ಅಲಂಕರಿಸುವ ಗುರಿಯನ್ನು ಹೊಂದಿದ್ದಾಳೆ.

ಕುಮಾರಿ ಜಬೀನಾಳ ಫಲಿತಾಂಶ ತಿಳಿದು ಪ್ರಗತಿ ಪ್ರೌಢಶಾಲೆಯ ಆಡಳಿತ ಮಂಡಳಿ, ಶಿಕ್ಷಕರು ಮತ್ತು ಸಿಬ್ಬಂದಿ ಆಕೆಯನ್ನು ಸನ್ಮಾನಿಸಿ ಗೌರವಿಸಿದರು. ಪ್ರಗತಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಚ್. ಡಿ. ಬ್ಯಾಕೂಡ, ವಿಜಯಕುಮಾರ ಕುಳಲಿ, ಟಿ.ಆಯ್. ವಸ್ತ್ರದ, ಬಿ. ಬಿ. ಪೂಜಾರಿ, ಬಿ. ಬಿ. ಶಿರಮಗೊಂಡ, ಬಿ. ಎಲ್. ಮನ್ನಿಕೇರಿ, ಶಿಕ್ಷಕಿಯರಾದ ಡಿ. ಜಿ. ದೇಸಾಯಿ, ಎಸ್. ಆರ್. ಅತ್ತಿಮಠದ, ಪಿ. ಎಂ. ಕರಿಜಾಡರ, ಕುಮಾರಿ ಎಸ್. ಎಂ. ಬಡಿಗೇರ, ಪಿ. ಎಂ. ಬೆಟಗೇರಿ, ಜೆ. ಬಿ. ಹಿರೇಮಠ ಸೇರಿದಂತೆ ಇನ್ನೂ ಹಲವರು ಉಪಸ್ಥಿತರಿದ್ದರು.

## ಕ್ರೀಡಾಗಂಟು ವಿತರಣೆಗೆ ಅರ್ಜಿ

**ಬಾಗಲಕೋಟೆ :** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕೇಂದ್ರ ಕಚೇರಿಯಿಂದ ಬಾಗಲಕೋಟೆ ಜಿಲ್ಲೆಗೆ ಸರಬರಾಜಾದ ಕ್ರೀಡಾ ಗಂಟುಗಳನ್ನು ಅರ್ಹತೆಯನ್ನೊಳಗೊಂಡ ಎಸ್‌ಸಿ, ಎಸ್‌ಟಿ ಸಂಘ ಸಂಸ್ಥೆಗಳಿಗೆ ಕ್ರೀಡಾಗಂಟುಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ಶೈಕ್ಷಣಿಕ, ಕ್ರೀಡಾ, ಸಾಂಸ್ಕೃತಿಕ ಹಾಗೂ ಸಮುದಾಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ 15 ರಿಂದ 35 ವರ್ಷ ವಯೋಮಿತಿಯ ಯುವಜನರು ಕಾನೂನು ಬದ್ಧವಾಗಿ ಕರ್ನಾಟಕ ಸಂಘ ಸಂಸ್ಥೆಗಳ ನೋಂದಾವಣೆ ಕಾಯಿದೆ 1960ರಡಿಯಲ್ಲಿ ಜಿಲ್ಲಾ ಸಹಕಾರ ಇಲಾಖೆಯಲ್ಲಿ 2024-25ನೇ ಸಾಲಿನ ಆರ್ಥಿಕ ವರ್ಷದಲ್ಲಿ ಹೊಸದಾಗಿ ನೋಂದಾಯಿಸಿ ಕೊಂಡಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಂಡು ಪ್ರಮಾಣ ಪತ್ರ ಪಡೆದ ಪರಿಶಿಷ್ಟ ಜಾತಿ ಮತ್ತು ಪಂಗಡದ ಯುವಜನ ಸಂಘ ಸಂಸ್ಥೆಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.

ಯುವ ಸಂಘವು ಕಡ್ಡಾಯವಾಗಿ ಚಾಲ್ತಿಯಲ್ಲಿದ್ದು, ಕ್ರೀಯಾಶೀಲವಾಗಿರಬೇಕು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಮಾನ್ಯತೆ ಕೋರುವ ಸಂಘ-ಸಂಸ್ಥೆಗಳು ಜಿಲ್ಲಾ ಸಹಕಾರ ಇಲಾಖೆಯಿಂದ ನೋಂದಣಿ ಮಾಡಿಸಿದ ಸಂಘ ಸಂಸ್ಥೆಯ ದೃಢೀಕರಿಸಲ್ಪಟ್ಟ ಬೈಲಾ ಪ್ರತಿ, ಮಾನ್ಯತೆ ಕೋರುವ ಸಂಸ್ಥೆಯ ಪದಾಧಿಕಾರಿಗಳ ಹೆಸರು, ವಯಸ್ಸು ಮತ್ತು ವಿಳಾಸದ ಪಟ್ಟಿಯೊಂದಿಗೆ ಅರ್ಜಿ ಸಲ್ಲಿಸುವಂತೆ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354-235896, ಮೊನಂ.9739722700, 9945284771ಗೆ ಸಂಪರ್ಕಿಸಬಹುದಾಗಿದೆ.

## ವಿಷಯಾತೀತ ಸುಖಕ್ಕಾಗಿ ಮನಸ್ಸು ಅಂತರ್ಮುಖಿಯಾಗಲಿ




**ಜಮಖಂಡಿ :** ವಿಷಯಾತೀತ ಆನಂದ ಸಿಗಬೇಕಾದರೆ ಮಾಯೆಯನ್ನು ಮೀರಿ ಮನಸ್ಸು ಅಂತರ್ಮುಖಿಯಾಗಬೇಕು. ಅದಕ್ಕೆ ಸತ್ಸಂಗ ಮಾಡಬೇಕು. ನಾನು ಎಂದರೆ ಯಾರು ? ನಾಮರೂಪ ನಾನಲ್ಲ. ನಾಮರೂಪ ಕೇವಲ ವ್ಯವಹಾರಕ್ಕಾಗಿ. ಆದ್ದರಿಂದ ಬ್ರಹ್ಮಜ್ಞಾನ ಮಾಡಿಕೊಂಡು ಮೋಕ್ಷ ಹೊಂದಬೇಕು ಎಂದು ಲಿಂಗನೂರಿನ ಅವಧೂತ ಮಠದ ಶಿವಪುತ್ರ ಅವಧೂತರು ಹೇಳಿದರು.

ತಾಲ್ಲೂಕಿನ ಹುಲ್ಯಾಳ ಗ್ರಾಮದ ಶ್ರೀ ಗುರುದೇವಾಶ್ರಮದ ಶ್ರೀ ಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಪ್ರತಿ ತಿಂಗಳು ನಾಲ್ಕನೇ ಭಾನುವಾರ ಹಮ್ಮಿಕೊಳ್ಳುವ ಶ್ರೀ ಗುರುದೇವ ಸತ್ಸಂಗದ ಮಾಚ9 23 ರ ಮಾಸಿಕ ಕಾರ್ಯಕ್ರಮದ ಸಾನಿಧ್ಯ ವಹಿಸಿ 'ತೋರದಯ್ಯಾ ಸುಖ ತೋರದಯ್ಯಾ' ಎಂಬ ವಿಷಯ ಕುರಿತು ಅವರು ಅನುಭವ ಹಂಚಿಕೊಳ್ಳುತ್ತ ಆಶೀರ್ವಚನ ನೀಡಿದರು.

ವಿಷಯಾತೀತ ಸುಖ ತೋರಬೇಕಾದರೆ ಬ್ರಹ್ಮಜ್ಞಾನ ಬೇಕು. ಬ್ರಹ್ಮಜ್ಞಾನ ಎಂದರೆ ಆತ್ಮಜ್ಞಾನ. ಆತ್ಮಜ್ಞಾನ ಎಂದರೆ ನಿಜದ ಅರಿವು. ಅದಕ್ಕೆ ಅನುಭಾವ ಎನ್ನುತ್ತಾರೆ. ಮೋಕ್ಷ ಸಾಮ್ರಾಜ್ಯ ಸೇರಲು ನೀತಿಯಿಂದ ನಡೆಯಬೇಕು.ಬ್ರಹ್ಮಜ್ಞಾನ ಸಂಪಾದಿಸಬೇಕು ಎಂದರು. ಹುಲ್ಯಾಳದ ಗುರುದೇವಾಶ್ರಮದ ಹರ್ಷಾನಂದ ಸ್ವಾಮಿಗಳು ನೇತೃತ್ವ ವಹಿಸಿ ಮಾತನಾಡಿ, ಬ್ರಹ್ಮಜ್ಞಾನ ಕ್ಷಣಿಕವಲ್ಲ. ಆದರೆ, ಬರಿ ಬ್ರಹ್ಮಜ್ಞಾನದಿಂದ ಸುಖವಿಲ್ಲ. ನಿರಂತರವಾಗಿ ಸುಖ ಪಡೆಯಲು ಬ್ರಹ್ಮಜ್ಞಾನ ಅನುಭವ ಸಿದ್ಧಿಯಾಗಬೇಕು. ನಾನು ನನ್ನೊಳಗೆ ಇದ್ದಾಗ ಮಾತ್ರ ನಿಜವಾದ ಸುಖ ಪ್ರಾಪ್ತಿಯಾಗುತ್ತದೆ ಎಂದು ಹೇಳಿದರು.

ಸುಖ ಮತ್ತು ಆನಂದ ಹೊರಗೆ ಎಲ್ಲಿಯೂ ಇಲ್ಲ. ವಸ್ತು ಮತ್ತು ವಿಷಯಗಳಲ್ಲಿ ಸುಖವಿಲ್ಲ. ನನ್ನನ್ನು ನಾನು ಅರಿತುಕೊಳ್ಳುವುದರಲ್ಲಿಯೇ ಸುಖವಿದೆ. ನನ್ನ ಸಮೀಪ ನಾನಿದ್ದಾಗ ಮಾತ್ರ ಸುಖ ಲಭಿಸುತ್ತದೆ. ಆತ್ಮ, ಪರವಸ್ತು ತಾನಾಗಬೇಕು. ಆಗ ನಾನು ಪರವಸ್ತು ಅನ್ನುವುದು ಸಹ ಉಳಿದಿರುವುದಿಲ್ಲ. ಆ ಅವಸ್ಥೆಯಲ್ಲಿ ಒಂದೇ ಇರುತ್ತದೆ. ಎರಡು ಸಹ ಇರುವುದಿಲ್ಲ ಎಂದರು.

ಈ ಸಂದರ್ಭದಲ್ಲಿ ಗುರುಬಸುಗೌಡ ಪಾಟೀಲ, ಪರಮೇಶ್ವರ ತೇಲಿ, ರಾಮಚಂದ್ರ ಹೂಗಾರ, ಸಿದ್ದು ಉಪ್ಪಲದಿನ್ನಿ, ಪುಂಡಲೀಕ ಭಜಂತ್ರಿ, ಶಿವಾನಂದ ಬಾಡನವರ ಸಂಗೀತ ಸೇವೆ ಸಲ್ಲಿಸಿದರು.

ಹೃಷಿಕೇಶದಗಂಗಾನಂದಮಹಾರಾಜರು,ಶ್ರೀ ಗುರುದೇವಾಶ್ರಮದ ಪುಂಡಲೀಕಶಾಸ್ತ್ರಿಗಳು ಸಾನಿಧ್ಯ ವಹಿಸಿದ್ದರು. ಬಸವಜ್ಯೋತಿ ಶಿಕ್ಷಣ ಸಮೂಹ ಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಬಸವರಾಜ ಕಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪೃಥ್ವಿರಾಜ ಹೊನಗೌಡ ಸ್ವಾಗತಿಸಿ ನಿರೂಪಿಸಿದರು.

### ಬಿಸಿಲಿನ ತಾಪಕ್ಕೆ ಬಸವಳಿದ ಜನರು ಎಳೆ ನೀರಿಗೆ ಮೊರೆ ಹೋಗಿರುವದು

## ಬಿಸಿಲಿಗೆ ಬಸವಳಿದ ಜನ: ನಿತ್ಯ ಬೆವರಿನ ಸ್ನಾನ




-ಮಲ್ಲಿಕಾರ್ಜುನ ತುಂಗಳ

**ರಬಕವಿ-ಬನಹಟ್ಟಿ :** ಕೆಂಡದಂಥ ಬಿಸಿಲು, ಹಿಂದೆಂದೂ ಇರದಂಥ ತಾಪಮಾನ ರಬಕವಿ-ಬನಹಟ್ಟಿ ತಾಲೂಕಿನ ಜನತೆಯು ಮಧ್ಯಾಹ್ನ ಹೊತ್ತು ಹೊರಗೆ ಬರದಂತೆ ಬಿಸಿಲು ಎಚ್ಚರಿಕೆಯ ಗಂಟೆ ಬಾರಿಸುತ್ತಿದೆ.

ಬರೋಬ್ಬರಿ 39 ಡಿಗ್ರಿಯಷ್ಟು ಬಿಸಿಲಿನ ತಾಪದಿಂದಾಗಿ ವಯಸ್ಕರು ಮನೆ ಬಿಟ್ಟು ಹೊರಗೆ ಬರುತ್ತಿಲ್ಲ. ಮಕ್ಕಳು ಬಿಸಿಲಿನ ಭಯದಿಂದ ಸಂಚಾರ ನಡೆಸುತ್ತಿಲ್ಲ. ಮನೆ ಹೊರಗೆ ಕಾಲಿಟ್ಟರೆ ಬರೆ ಎಳೆಯುವ ಬಿಸಿಲು, ಎಷ್ಟು ನೀರು, ತಂಪು ಪಾನಿಯ ಕುಡಿದರೂ ನೆಮ್ಮದಿ ಸಿಗುತ್ತಿಲ್ಲ. ಉರಿ ಬಿಸಿಲಿಗೆ ತಲೆ ಸಿಡಿದು ಹೋಗುತ್ತದೋ ಏನೊ ಎಂಬ ಭಯ. ಒಟ್ಟಾರೆ ಜನ ಬಿಸಿಲಿಗೆ ಬಸವಳಿದು ಹೋಗಿದ್ದಂತೂ ಸತ್ಯ.

ಹವಾಮಾನ ನೋಡಿದರೆ ಮಳೆಯಾಗುವ ಸಂಭವ ಕಡಿಮೆ. ಕಾರಣ ತಾಪಮಾನ ಮತ್ತಷ್ಟು ಹೆಚ್ಚಳಗೊಳ್ಳುವ ಲಕ್ಷಣಗಳು ಗೋಚರಿಸುತ್ತಿವೆ. ಉರಿ ಬಿಸಿಲಿನಿಂದ ಮನೆ ಬಿಟ್ಟು ಹೊರಗೆ ಬಂದರೆ ಹಿಂದೆ ಮುಂದೆ ನೋಡುವ ಸ್ಥಿತಿ.

ನೇಕಾರಿಕೆ ವೃತ್ತಿಯನ್ನೇ ಹೊಂದಿರುವ ಅವಳಿ ನಗರದ ಜನತೆಯ ಮನೆಗಳು ಹೆಚ್ಚಿನ ಪ್ರಮಾಣದಲ್ಲಿ ಪತ್ರಾಸ್ ಶೆಡ್ಡಗಳಿಂದಲೇ ಕೂಡಿವೆ. ಮನೆಯೊಳಗೆ ಕಾಲಿಟ್ಟರೂ ಸಹಿತ ಕಾದ ಕಬ್ಬಿಣದ ಪತ್ರಾಸದಿಂದ ಮತ್ತಷ್ಟು ಕಾವು ಬೆವರಿನ ಸ್ನಾನ ಮಾಡಿಸುವಲ್ಲಿ ಕಾರಣವಾಗುತ್ತಿದೆ. ಕಾಂಕ್ರೀಟ್ ಮನೆಯಿದ್ದರೂ ಸಹಿತ ಕಾದು ಕಬ್ಬಿಣದ ಕಡಲೆಗಳಾಗಿವೆ. ರಾತ್ರಿಯಾದರೂ ಬೆಂಕಿಯ ಮನೆಯಲ್ಲಿ ಕುಳಿತ ಅನುಭವ ನೇಕಾರರದ್ದಾಗಿದೆ. ಇದರಿಂದ ಜನ ರಾತ್ರಿ ಹೊತ್ತು ಮನೆಯಿಂದ ಹೊರಗೆ ತಣ್ಣನೆ ಗಾಳಿಗೆ ಮೈಯೊಡ್ಡಿ ಕುಳಿತುಕೊಂಡರೆ, ಕೆಲವರು ವಿಹಾರಕ್ಕೆ ಹೋಗುತ್ತಾರೆ.

ತಂಪು ಪಾನೀಯಕ್ಕೆ ಬೇಡಿಕೆ: ಬಿಸಿಲಿನ ತಾಪಕ್ಕೆ ಜನತೆ ತಂಪು ಪಾನೀಯ, ಹಣ್ಣುಗಳಿಗೆ ಮಾರು ಹೋಗುತ್ತಿದ್ದಾರೆ. ಎಳೆ ನೀರಿಗೆ ಸದ್ಯ ಹೆಚ್ಚಿನ ಬೇಡಿಕೆ ಬಂದಿದ್ದು, 30 ರೂ.ಗೆ ಒಂದರಂತೆ ಉತ್ತಮ ಎಳೆ ನೀರನ್ನು ಪಡೆಯುವಲ್ಲಿ ಸ್ಥಳೀಯರು ಯಶಸ್ಸು ಕಾಣುತ್ತಿದ್ದು, ಎಳೆ ನೀರಿಗೆ ಬೇಡಿಕೆ ಹೆಚ್ಚಿದೆ. ಅಲ್ಲದೆ ಲಿಂಬು ಸೋಡಾ, ಶರಬತ್, ಮಜ್ಜಿಗೆ ಸೇರಿದಂತೆ ತಂಪು ಪಾನೀಯಗಳಿಗೂ ಜನ ಮುಗಿ ಬಿದ್ದಿದ್ದಾರೆ.

ಬಿಸಿಲಿನ ತಾಪಕ್ಕೆ ಎಲ್ಲಿ ಕುಂತರೂ, ನಿಂತರೂ ಚಡಪಡಿಸುವ ಜನ, ಬೆವರಿನ ಸ್ನಾನದಿಂದ ಬಸವಳಿದು ಹೋಗಿ, ಬೆಳಿಗ್ಗೆ ಎಂಟು ಗಂಟೆಯಾಗುತ್ತಿದ್ದಂತೆಯೆ ಬಿರು ಬಿಸಿಲು ಜನರನ್ನು ಭಯಗೊಳಿಸುವಲ್ಲಿ ಕಾರಣವಾಗಿದೆ.

ಮನೆಯಲ್ಲಿ ತಿರುಗುವ ಫ್ಯಾನ್ಗಳಿಗೆ ವಿಶ್ರಾಂತಿಯೇ ಇಲ್ಲ. ಕರೆಂಟು ಕೈಕೊಟ್ಟರೆ ಜನ ವಿಲ ವಿಲ ಒದ್ದಾಡುವ ಸ್ಥಿತಿ. ಹೆಸ್ಕಾಂ ಇಲಾಖೆಗೆ ಹಿಡಿಶಾಪ ಹಾಕುತ್ತಿದ್ದರೆ, ವಯೋವೃದ್ಧರು, ರೋಗಿಗಳ ಸ್ಥಿತಿ ದೇವರೇ ಬಲ್ಲ.

## ಡಿಕೆಶಿ ಹೇಳಿಕೆ ವಿರೋಧಿಸಿ ಬಿಜೆಪಿ ಪ್ರತಿಭಟನೆ




**ರಬಕವಿ-ಬನಹಟ್ಟಿ :** ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರರ ಸಂವಿಧಾನ ವಿರೋಧಿ ಹೇಳಿಕೆಯನ್ನು ಖಂಡಿಸಿ ತೇರದಾಳ ಮತಕ್ಷೇತ್ರದ ಬಿಜೆಪಿ ಪಕ್ಷದ ವತಿಯಿಂದ ಮಂಗಳವಾರ ಸಾಯಂಕಾಲ ಶಾಸಕ ಸಿದ್ದು ಸವದಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ಶಾಸಕ ಸಿದ್ದು ಸವದಿ ಮಾತನಾಡಿ, ಮುಸ್ಲಿಮರಿಗೆ ಗುತ್ತಿಗೆಯನ್ನು ನೀಡುವ ಸಂದರ್ಭದಲ್ಲಿ ನಾಲ್ಕರಷ್ಟು ಮೀಸಲಾತಿಯನ್ನು ನೀಡುವ ಮೂಲಕ ಕಾಂಗ್ರೆಸ್ ಪಕ್ಷ ಸಂವಿಧಾನ ವಿರೋಧಿ ಚಟುವಟಿಕೆಯನ್ನು ಮಾಡುತ್ತಿರುವುದು ಖಂಡನೀಯವಾಗಿದೆ. ಕಾಂಗ್ರೆಸ ಪಕ್ಷ ಓಟಿನಗೋಸ್ಕರ ಮುಸಲ್ಮಾನರ ತುಷ್ಟೀಕರಣದ ರಾಜಕೀಯ ಮಾಡುತ್ತಿದೆ. ಇದನ್ನು ಬಿಜೆಪಿ ಖಂಡಿಸುತ್ತದೆ. ಕಾಂಗ್ರೆಸ್ ಪಕ್ಷದಿಂದ ಸಂವಿಧಾನದ ರಕ್ಷಣೆ ಸಾಧ್ಯವಿಲ್ಲ ಎಂದು ಶಾಸಕ ಸಿದ್ದು ಸವದಿ ಆರೋಪಿಸಿದರು.

ರಾಜ್ಯ ಕಾಂಗ್ರೆಸ್ ಪಕ್ಷ ರಾಜ್ಯವನ್ನು ಲೂಟಿ ಮಾಡುತ್ತಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪದಾಧಿಕಾರಿಗಳಿಗೆ ಸರ್ಕಾರದ ಖಜಾನೆಯಿಂದ ಕೋಟಿಗಟ್ಟಲೆ ಹಣವನ್ನು ನೀಡುತ್ತಿದೆ. ಗುತ್ತಿಗೆದಾರರಿಗೆ ಹಣ ನೀಡದೆ ಇರುವುದರಿಂದ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಗುತ್ತಿಗೆದಾರರಿಂದ ಕಮೀಶನ್ ಕೇಳುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ರಾಜ್ಯದ ಹಿತವನ್ನು ಕಾಪಾಡುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ. ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ ಮುಖ್ಯಮಂತ್ರಿಯಾಗುವ ಉದ್ದೇಶದಿಂದ ಕಾಂಗ್ರೆಸ್ ಮುಖಂಡರನ್ನು ಹನಿ ಟ್ರ್ಯಾಪ್ ಗೆ ಒಳಗಾಗುವಂತೆ ಮಾಡುತ್ತಿದ್ದಾರೆ ಎಂದು ಶಾಸಕ ಸಿದ್ದು ಸವದಿ ಆರೋಪಿಸಿದರು.

ಸ್ಥಳೀಯ ಈಶ್ವರಲಿಂಗ ಮೈದಾನದಿಂದ ಜಮಖಂಡಿ ಕುಡಚಿ ಹೆದ್ದಾರಿಯವರೆಗೆ ಪ್ರತಿಭಟನಾಕಾರರು ಬೃಹತ್ ಪ್ರತಿಭಟನೆಯನ್ನು ನಡೆಸಿದರು. ಡಿ. ಕೆ. ಶಿವಕುಮಾರ ಮತ್ತು ಸರ್ಕಾರದ ವಿರುದ್ಧದ ಭಿತ್ತಿ ಪತ್ರಗಳನ್ನು ಪ್ರದರ್ಶನ ಮಾಡಿ ಘೋಷಣೆಗಳನ್ನು ಕೂಗಿದರು.

ಪ್ರಭಾಕರ ಮೋಳೇದ, ಪರಶುರಾಮ ಕಾಖಂಡಕಿ, ನಿಂಗರಾಜ ನಾಯಕ, ಈರಣ್ಣ ಚಿಂಚಖಂಡಿ, ಶಿವಾನಂದ ಗಾಯಕವಾಡ, ಈಶ್ವರ ಕಾಡದೇವರ, ಮಹಾದೇವ ಕೋಟ್ಯಾಳ, ಸದಾಶಿವ ಸಾರವಾಡ, ರವಿ ಕೊರ್ತಿ, ರವೀಂದ್ರ ಕರಲಟ್ಟಿ, ವಿಜಯ ಕಲಾಲ, ಸುರೇಶ ಅಕ್ಕಿವಾಟ, ರಮೇಶ ಧರೆನ್ನವರ, ಚಿನ್ನಪ್ಪ ದೊಡಮನಿ, ಯಲ್ಲಪ್ಪ ಕಟಗಿ, ಪ್ರವೀಣ ಧಬಾಡಿ, ಅರುಣ ಬುದ್ನಿ, ಆನಂದ ಕಂಪು, ಚಂದ್ರಶೇಖರ ಮಿರ್ಜಿ, ಬಾಬಾಗೌಡ ಪಾಟೀಲ, ಅಶೋಕ ಬೋಸ್ಲೆ, ಗೋವಿಂದ ಡಾಗಾ,

ಶ್ರೀಶೈಲ ಯಾದವಾಡ, ವಿಧ್ಯಾಧಬಾಡಿ, ಗೌರಿ ಮಿಳ್ಳಿ, ಶಶಿಕಲಾ ಸಾರವಾಡ, ಸದಾಶಿವ ಸಂತಿ, ಪವಿತ್ರಾ ತುಕ್ಕನ್ನವರ, ಸವಿತಾ ಹೊಸೂರ, ಸುವರ್ಣ ಕೊಪ್ಪದ, ವೈಷ್ಣವಿ ಬಾಗೇವಾಡಿ, ಸಿದ್ದನಗೌಡ ಪಾಟೀಲ, ಭೀಮಶಿ ಪಾಟೀಲ, ಈಶ್ವರ ಬಿರಾದಾರಪಾಟೀಲ, ಮಲಕಪ್ಪ ಪಾಟೀಲ, ಜಿ. ಎಸ್. ಗೊಂಬಿ, ದುರ್ಗವ್ವ ಹರಿಜನ, ಸುವರ್ಣಾ ಕೊಪ್ಪದ, ರಾಮಣ್ಣ ಭದ್ರನ್ನವರ, ಮಿಲನ ಚುರಮುರಿ, ಮಹಾಂತೇಶ ಬನ್ನೂರ, ಹುಚ್ಚಪ್ಪ ಜಾಡಗೌಡ, ಸುಧೀರ ನಡುವಿನಮನಿ, ಪರಶುರಾಮ ಬಸವ್ವಗೋಳ, ತಿಪ್ಪಣ್ಣ ಬಸಪ್ಪಗೋಳ, ಶ್ರೀಶೈಲ ಆಲಗೂರ, ಶ್ರೀಶೈಲ ಬಾವಿಕಟ್ಟಿ, ಶಂಕರೆಪ್ಪ ಬುಜಬುಲಿ, ಬಸಪ್ರಭು ಹಟ್ಟಿ, ಮಟ್ಟಿಕಲ್ಲಿ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮ



**ಇಲಕಲ್ಲ :** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಾಗಲಕೋಟೆ ಆಶಾದೀಪ ಅಂಗವಿಕಲರ ಸರ್ವ ಅಭಿವೃದ್ಧಿ ಸೇವಾ ಸಂಸ್ಥೆ ಮತ್ತು ವಿಶ್ವ ಜ್ಯೋತಿ ಶಿಕ್ಷಣ ಗ್ರಾಮೀಣಾಭಿವೃದ್ಧಿ ಸಂಸ್ಥೆ ಕಂದಗಲ್ಲ ಮಹಿಳಾ ಸಾಂತ್ವನ ಸಹಾಯವಾಣಿ ಕೇಂದ್ರ ಇಲಕಲ್ಲ ಇವರ ಸಂಯುಕ್ತ ಆಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಸಮುದಾಯ ಭವನ ಕಂದಗಲ್ಲದಲ್ಲಿ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಈ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಇಲಕಲ್ಲ ನಗರಸಭೆ ಅಧ್ಯಕ್ಷೆಯಾದ ಶ್ರೀಮತಿ ಸುಧಾರಾಣಿ ಸಂಗಮ ಮಾತನಾಡಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅಮೇರಿಕಾದ ಸಮಾಜವಾದಿ ಪಕ್ಷ ಈ ದಿನವನ್ನ ಕೆಲಸದ ಪರಿಸ್ಥಿಯನ್ನು ವಿರೋಧಿಸಿ ನ್ಯೂಯಾರ್ಕ್ ನಗರದಲ್ಲಿ ನಡೆದ "ಸರಕಾರಿ ಕಾರ್ಮಿಕರ ಚಳುವಳಿ"ಯಲ್ಲಿ ಪ್ರತಿಭಟಿಸಿದ ಮಹಿಳೆಯರಿ ಅರ್ಪಿಸಲಾಯಿತು ಎಂದು ಹೇಳಿದರು.

ಆಶಾದೀಪ ಸಂಸ್ಥೆಯವರು ಪ್ರತಿ ವರ್ಷ ಅತೀ ವಿಜೃಂಭಣೆಯಿಂದ ಆಚರಿಸುತ್ತಾರೆ. ಮತ್ತು ವಿಕಲಚೇತನರ ಕ್ಷೇತ್ರದಲ್ಲಿ ಸತತವಾಗಿ ಉತ್ತಮ ಕಾರ್ಯವನ್ನು ಮಾಡುತ್ತಾ ಬಂದಿದ್ದಾರೆ ನಮ್ಮ ನಗರಸಭೆ ವತಿಯಿಂದ ಶೇ. 5 ಅನುದಾನದಲ್ಲಿ ಹಲವಾರು ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ತಲುಪಿಸಿದ್ದೇವೆ. ಎಂದು ಸಂತೋಷದಿಂದ ತಮಗೆ ತಿಳಿಸಲು ಬಯಸುತ್ತೇನೆ. ಈ ಒಂದು ಸಂಸ್ಥೆ ಉನ್ನತಕ್ಕೆ ಎರಲಿ ಎಂದು ಆಶಿಸುತ್ತೇನೆ. ಮತ್ತು ಯಾವಾಗಲು ನಿಮ್ಮ ಜೊತೆ ಬೆನ್ನೆಲುಬಾಗಿ ನಿಲ್ಲುತ್ತೇನೆಂದು ಹೇಳಿದರು.

ಕಾರ್ಯಕ್ರಮದ ಮುಖ್ಯಅತಿಥಿಗಳಾಗಿ ಆಗಮಿಸಿದ ಸಮಾಜ ಸೇವಕರಾದ ಶ್ರೀಮತಿ ಜಯಶ್ರೀ ಸಾಲಿಮಠ ಮಾತನಾಡಿ ಹೆಣ್ಣು ಮಕ್ಕಳು ಎಲ್ಲಾ ರಂಗದಲ್ಲೂ ಮುಂದೆ ಬಂದಿದ್ದಾರೆ ಇಂತಹ ಸಂಧರ್ಭದಲ್ಲಿ ಚಿಕ್ಕ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಆಗುತ್ತಿದೆ ಈ ಸಮಾಜ ಎತ್ತ ಸಾಗುತ್ತದೆ ಎಂದು ಭಯದ ವಾತಾವರಣವಾಗಿದೆ ನಾವೆಲ್ಲರೂ ಇಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ನಾವೆಲ್ಲರೂ ಒಗ್ಗಟ್ಟಾಗಿ ನಿಂತಾಗ ಮಾತ್ರ ಹೆಣ್ಣು ಮಕ್ಕಳ ಮೇಲೆ ಇಂತಹ ಅತ್ಯಾಚಾರ ದೌರ್ಜನ್ಯಗಳು ನಿಲ್ಲುತ್ತದೆ ಎಂದು ತಿಳಿಸಿದರು.

ಕಂದಗಲ್ಲ ವಲಯದ ಅಂಗನವಾಡಿ ಮೇಲ್ವಿಚಾರಕಿಯಾದ ಶ್ರೀಮತಿ ರಾಜೇಶ್ವರಿ ಗೌಡರ ಮಾತನಾಡಿ ಸರಕಾರದಿಂದ ಹೆಣ್ಣು ಮಕ್ಕಳಿಗೆ ಹಲವಾರು ಯೋಜನೆಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು.

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ನಂದವಾಡಗಿ ಮಠದ ಪೂಜ್ಯರಾದ ಷಟಸ್ಥಲ ಬ್ರಹ್ಮ ಮಹಾಂತಲಿಂಗ ಶಿವಾಚಾರ್ಯರು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಸವರಾಜ ಅಳ್ಳೊಳ್ಳಿ ಗ್ರಾ.ಪಂ ಅಧ್ಯಕ್ಷರು ಕಂದಗಲ್ಲ ಮುಖ್ಯ ಅತಿಥಿಗಳಾಗಿ ಶ್ರೀಮತಿ ಶರಣಮ್ಮ ಭಜಂತ್ರಿ ಉಪಾಧ್ಯಕ್ಷರು ಗ್ರಾ.ಪಂ ಕಂದಗಲ್ಲ, ಶ್ರೀಮತಿ ಜಯಶ್ರೀ ಸಾಲಿಮಠ, ಮಹ್ಮದ ಜುನೈದ ಬಡಿಗೇರ, ಲಕ್ಷ್ಮಿ ?ಮೇಬಾಯಿ ಗಾಜಿ, ವೀರನಗೌಡ ಗೌಡರ, ರೇಷ್ಮಾ ಪಿಂಜಾರ, ಸಂಸ್ಥೆಯ ಸಹಕಾರ್ಯದರ್ಶಿಯಾದ ಹುಸೇನಸಾಬ ಮುದಗಲ್ಲ ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳೆಯರಿಗೆ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದ ನಿರೂಪಣೆ ಸುರೇಶ ಹಡಪದ ಸ್ವಾಗತ ಅಮೃತಾ ಹುಬ್ಬಳ್ಳಿ, ವಂದನಾರ್ಪಣೆ ರೇಣುಕಾ ತಳವಾರ ಮಾಡಿದರು.

# ರಕ್ತದಾನದಿಂದ ಜೀವ ಉಳಿಸುವ ಪುಣ್ಯ ಸಿಗುತ್ತದೆ: ಡಾ. ಶಿವನಗೌಡ ಪಾಟೀಲ್



**ಕೊಪ್ಪಳ :** ಎಲ್ಲಾ ದಾನಗಳಲ್ಲಿ ಶ್ರೇಷ್ಠವಾದ ದಾನ ರಕ್ತದಾನ, ರಕ್ತದಾನ ದಿಂದ ಒಂದು ಜೀವ ಉಳಿಸುವಂತಹ ಪುಣ್ಯ ಸಿಗುತ್ತದೆ ಅದಕ್ಕಾಗಿ ಆರೋಗ್ಯವಂತ ಯುವ ಪೀಳಿಗೆ ಪ್ರತಿಯೊಬ್ಬರು ರಕ್ತದಾನ ಮಾಡಿ ಜೀವ ಉಳಿಸುವಂತಹ ಪುಣ್ಯ ಗಳಿಸಿಕೊಳ್ಳಿ ಎಂದು ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಧ್ಯಕ್ಷರಾದ ಡಾ. ಶಿವನಗೌಡ ಪಾಟೀಲ್ ಹೇಳಿದರು.

ಅವರು ಕೊಪ್ಪಳದ ಅಟಲ್ ಬಿಹಾರಿ ವಾಜಪೇಯಿ ಕಾನೂನು ಮಹಾವಿದ್ಯಾಲಯದಲ್ಲಿ ಸಂವೇದನಾ 2, ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಭಗತ್ ಸಿಂಗ್, ಸುಖದೇವ್, ಮತ್ತು ರಾಜಗುರು ಇವರ 94ನೇ ವರ್ಷದ ಹುತಾತ್ಮ ದಿನಾಚರಣೆಯ ಅಂಗವಾಗಿ ಸವೇದನಾ 2, ಏರ್ಪಡಿಸಿದ ರಕ್ತದಾನ ಶಿಬಿರ ದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು,

ಮುಂದುವರಿದು ಮಾತನಾಡಿ ಅನ್ನದಾನ ಅಕ್ಷರ ದಾನ ದಂತೆ ರಕ್ತದಾನ ಕೂಡ ಮಹತ್ವದ ದಾನವಾಗಿದೆ ಇದರಿಂದ ಒಂದು ಜೀವ ಒಂದು ಕುಟುಂಬ ಉಳಿಸುವಂತಹ ಕೆಲಸವಾಗುತ್ತದೆ, ಕಾರಣ ರಕ್ತದಾನ ಕೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ರಕ್ತದಾನದಿಂದ ಜೀವ ಉಳಿಸುವಂತಹ ಕೆಲಸ ನಮ್ಮೆಲ್ಲರಿಂದ ನಡೆಯಲಿ ಎಂದು ರಕ್ತದಾನದ ಮಹತ್ವ ಕುರಿತು ವಿಶೇಷ ಮಾಹಿತಿ ಯನ್ನು ಡಾ. ಶಿವನಗೌಡ ಪಾಟೀಲ್ ತಿಳಿಸಿದರು,

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್ ಮಹಿಳಾ ಘಟಕದ ಅಧ್ಯಕ್ಷರಾದ ಡಾ. ಕಸ್ತೂರಿ ಕರಮುಡಿ ಅವರು ಮಾತನಾಡಿ ರಕ್ತದಾನಕ್ಕೆ ಯುವ ಪೀಳಿಗೆ ಮುಂದಾಗಬೇಕು, ಎಲ್ಲಾ ದಾನಗಳಲ್ಲಿ ರಕ್ತದಾನ ಮಹತ್ವಪಡೆದಿದೆ ಇದು ಶ್ರೇಷ್ಠವಾದ ದಾನ ವಾಗಿದೆ ಎಂದು ಡಾ, ಕಸ್ತೂರಿ ಕರ ಮುಡಿ ಹೇಳಿದರು,

ಕಾಲೇಜಿನ ಪ್ರಾಚಾರ್ಯರಾದ ಉಷಾ ಹಿರೇಮಠ ಅಧ್ಯಕ್ಷತೆ ವಹಿಸಿ ಮಾತನಾಡಿ ರಕ್ತದಾನ ಮಹತ್ವ ಕುರಿತು ವಿವರಿಸಿದರು, ಉಪ ಪ್ರಚಾರರಾದ ಎಸ್,ಎಂ ,ಬಸವರಾಜ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು, ಕು, ಹುಲಿಗೆಮ್ಮ ನಿರೂಪಣೆಯನ್ನು ನೆರವೇರಿಸಿದರೆ,

ಸಂಸ್ಥೆಯ ಕಾರ್ಯದರ್ಶಿ, ಡಾ. ಸುಧಾಕರ್ ಮತ್ತು ಮಹಿಳಾ ಘಟಕದ ಕಾರ್ಯದರ್ಶಿ, ಡಾ. ಭಾಗ್ಯಶ್ರೀ ಗಾಯದ, ಹಾಗೂ ಡಾ, ಲಿಂಗರಾಜ್ ಶಿವರೆಡ್ಡಿ, ನ್ಯಾಯವಾದಿ ಯು ವಿ ಸೊಪ್ಪಿಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಕಿನ್ನಾಳ ದ ವೀರೇಶ್ ಮಟನ್ ಶಾಪ್‌ನ ಕುರಿ ಮಾಂಸಕ್ಕೆ ಭಾರೀ ಬೇಡಿಕೆ



**ಕೊಪ್ಪಳ :** ತಾಲೂಕಿನ ಐತಿಹಾಸಿಕ ಪ್ರಸಿದ್ಧ ಕಲೆಗಳ ತವರೂರು ಕಿನ್ನಾಳ ಗ್ರಾಮ ದ ವೀರೇಶ್ ಕಲಾಲ್ ಎಂಬುವರ ಮಟನ್ ಶಾಪನ ಕುರಿ ಮಾಂಸಕ್ಕೆ ಭಾರಿ ಬೇಡಿಕೆ ಕಂಡುಬರುತ್ತವೆ,

ಸದರಿ ಕಿನ್ನಾಳ ಗ್ರಾಮದ ವೀರೇಶ್ ಮಟನ್ ಶಾಪ್ ಗೆ ಗ್ರಾಮದವರಷ್ಟೇ ಅಲ್ಲ ಕೊಪ್ಪಳ ನಗರಸೇರಿದಂತೆಕುಕುನೂರುಮಂಗಳೂರು ಕುದುರೆಮೋತಿ ಅಲ್ಲದೆ ಅಕ್ಕಪಕ್ಕದ ಬಹುತೇಕ ಎಲ್ಲಾ ಗ್ರಾಮದ ಮಾಂಸಾಹಾರಿ ಊಟ ಸೇವಿಸುವ ಸಾರ್ವಜನಿಕರು ವಿಶೇಷವಾಗಿ ಕೆಲ ಅಧಿಕಾರಿ ವರ್ಗ ದವರು, ಸುತ್ತಮುತ್ತಲಿನ ಪ್ರದೇಶದ ಮಾಂಸಪ್ರಿಯ ನಾನ್ ವೆಜ್ ಊಟ ಮಾಡುವ ಸ್ಥಳೀಯ ಜನ ಪ್ರತಿನಿಧಿಗಳು ಇದೇ ಅಂಗಡಿಯಿಂದ ಕುರಿ ಮಾಂಸ ಖರೀದಿ ಮಾಡುತ್ತಾರೆ, ವಾರದ ಶನಿವಾರ ಮತ್ತು ಸೋಮವಾರ ಹೊರತುಪಡಿಸಿ ಉಳಿದೆಲ್ಲ ದಿನಗಳಲ್ಲಿ ಇಲ್ಲಿ ಕುರಿಮಾಂಸ ಲಭ್ಯವಾಗಿದೆ ಆದರೆ ವಾರದ ಪ್ರತಿ ರವಿವಾರ ಅಂದು ಇಲ್ಲಿ ವಿಪರೀತ ಜನ ಸೇರುವುದನ್ನು ಕಂಡುಬರುತ್ತವೆ ಏಕೆ ಎಂದು ವಿಚಾರಿಸಿದರೆ ಮಾಂಸ ಖರೀದಿಸಲು ಬಂದಿದ್ದೇವೆ ಎಂದು ಹೇಳುತ್ತಾರೆ ನೀವು ಎಲ್ಲಿಂದ ಬಂದಿದ್ದೀರಿ ಎಂದು ಕೇಳಿದರೆ ಅದಕ್ಕೆ ಅವರಿಂದ ಉತ್ತರ ಕೇಳಿ ಆಶ್ಚರ್ಯ ಉಂಟಾಗುತ್ತದೆ, ಹೌದಾ ಇಲ್ಲಿ ಅಷ್ಟು ಚೆನ್ನಾಗಿ ಕ್ವಾಲಿಟಿ ಇರುವ ಗುಣಮಟ್ಟದ ಕುರಿಮಾಂಸ ದೊರೆಯುತ್ತದೆ ಯೇ ಎಂದು ಕುತೂಹಲದಿಂದ ವಿಚಾರಿಸುತ್ತಾರೆ, ನಿಜ ಕೂಡ ಹೌದು, ಇಲ್ಲಿ ಸಿಗುವ ಕುರಿಮಾಂಸ ಕ್ವಾಲಿಟಿ ಇಂದ ಕೂಡಿರುತ್ತದೆ ಉತ್ತಮ ಗುಣಮಟ್ಟದ ಕುರಿ ಟಗರುಗಳು ಮಾತ್ರ ತಂದು ಅದರ ಮಾಂಸ ಇಲ್ಲಿ ಮಾರಾಟ ಮಾಡುತ್ತಾರೆ ಇದರ ಮಾಲಕ ಕಟುಗ ವೀರೇಶ್ ಕಲಾಲ್ ರವರಿಗೆ ವಿಚಾರಿಸಿದರೆ ನನ್ನ ಅಂಗಡಿಗೆ ಬರುವ ಮಾಂಸಾಹಾರಿ ಸೇವಿಸುವ ಗ್ರಾಹಕರು ಬಂದು ಇಲ್ಲಿಂದ ತೆಗೆದುಕೊಂಡುಹೋಗುವಮಾಂಸದರುಚಿ ಕಂಡು ಮತ್ತೆ ಮತ್ತೆ ನನ್ನ ಅಂಗಡಿಗೆ ಬರಬೇಕು ಎಂಬ ಅಭಿಲಾಷೆಯಿಂದ ಸಾಧ್ಯವಾದಷ್ಟು ಮಟ್ಟಿಗೆ ನಾನು ಒಳ್ಳೆ ಗುಣಮಟ್ಟದ ಕುರಿ ಟಗರು ಗಳನ್ನು ಖರೀದಿಸುವಾಗ ಹುಡುಕಿ ಹುಡುಕಿ ತಂದು ಅದರ ಮಾಂಸ ಮಾರಾಟ ಮಾಡುತ್ತೇನೆ ಅಂಗಡಿಗೆ ಬರುವ ಗ್ರಾಹಕರ ಹಿತ ಮತ್ತು ಅವರ ಅಭಿರುಚಿಗೆ ತಕ್ಕಂತೆ ನಾನು ಕುರಿ ಮಾಂಸ ಮಾರಾಟ ಮಾಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಒಳ್ಳೆಯ ಗುಣಮಟ್ಟದ ಕುರಿ ಟಗರು ಸಿಗದೇ ಇದ್ದ ಪಕ್ಷದಲ್ಲಿ ಅಂದು ಅಂಗಡಿಯನ್ನು ಬಂದ್ ಮಾಡಿರುತ್ತೇನೆ , ನನಗೆ ವ್ಯಾಪಾರ ಮತ್ತು ಲಾಭ ಅಷ್ಟೇ ಮುಖ್ಯವಲ್ಲ, ಗ್ರಾಹಕರ ಹಿತ ಮತ್ತು ಅಭಿರುಚಿ ಕೂಡ ಅಷ್ಟೇ ಮುಖ್ಯವಾಗಿದೆ,ಅದೇ ಬಹುಶಃ ನನ್ನ ಅಂಗಡಿಗೆ ಬರುವ ಗ್ರಾಹಕರಿಗೆ ಪಸಂದ್ ಆಗಿರಬಹುದು ಎಂದು ವೀರೇಶ್ ಮಟನ್ ಶಾಪ್ ನ ಮಾಲಕ ವೀರೇಶ್ ಕಲಾಲ್ ರವರು ಹೇಳುತ್ತಾರೆ,

ಅವರ ಜೊತೆಗೆ ಅವರ ತಾಯಿ ಕೂಡ ವ್ಯಾಪಾರದಲ್ಲಿ ಸಹಕಾರ ಸಹಾಯ ನೀಡುತ್ತಾರೆ ಎಂದು ವಿವರಿಸಿದರು.

# ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮವಹಿಸಿ ಸಿಇಓ ರಾಹುಲ್ ರತ್ನಂ ಪಾಂಡೇಯ



**ಕೊಪ್ಪಳ :** ಬೇಸಿಗೆ ಆರಂಭವಾಗಿರುವುದರಿಂದ ಜನರಿಗೆ ಕುಡಿಯುವ ನೀರಿನ ಸಮಸ್ಯೆಗಳಾಗದಂತೆ ಅಧಿಕಾರಿಗಳು ಮುಂಜಾಗ್ರತೆ ವಹಿಸಬೇಕೆಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಹೇಳಿದರು.

ಅವರು ಶುಕ್ರವಾರ ಕನಕಗಿರಿ ತಾಲೂಕಿನ ಹಿರೇಖೇಡಾ, ಮುಸಲಾಪುರ, ಚಿಕ್ಕಖೇಡಾ, ರಾಂಪುರ ಸೇರಿದಂತೆ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ನಂತರ ಸಂಬಂದಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿವಿಧ ಗ್ರಾಮಗಳ ಬೋರವೆಲಗಳ ಪರಿಶೀಲನೆ ನಡೆಸಿದ ಅವರು ಬೇಸಿಗೆ ಹಿನ್ನೆಲೆ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಗ್ರಾಮೀಣ ಕುಡಿಯುವನೀರುಮತ್ತುನೈರ್ಮಲ್ಯಇಲಾಖೆಯವರು ಕ್ರಮವಹಿಸಬೇಕು. ಆಯಾ ಗ್ರಾಮ ಪಂಚಾಯತಿ ಪಿಡಿಓಗಳು ತಮ್ಮ ವ್ಯಾಪ್ತಿಯ ಗ್ರಾಮಗಳಲ್ಲಿ ಸರಿಯಾಗಿ ಕುಡಿಯುವ ನೀರು ಸರಬರಾಜು ಆಗುವಂತೆ ನೋಡಿಕೊಳ್ಳಲು ಸೂಚನೆ ನೀಡಿದರು.

ಇದೇ ವೇಳೆ ಮುಸಲಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ರಾಂಪುರ ಕೆರೆಗೆ ಭೇಟಿ ನೀಡಿ ಕೆರೆಯು ಸಂಪೂರ್ಣ ಭತ್ತಿರುವುದನ್ನು ಕಂಡು, ಕೆರೆಗೆ ನೀರು ತುಂಬಿಸಲು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ದೂರವಾಣಿ ಮೂಲಕ ಮಾತನಾಡಿ ಕೆರೆಗೆ ನೀರು ತುಂಬಿಸಲು ಹೇಳಿದರು.

ಈ ಸಂದರ್ಭದಲ್ಲಿ ಕನಕಗಿರಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಕೆ.ರಾಜಶೇಖರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿ ದೇವಣ್ಣ ಕಟ್ಟಿ. ಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಯು. ಮಲ್ಲಿಕಾರ್ಜುನ್. ನಾಗೇಶ ಎಚ್. ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬೆಂಬಲ ಬೆಲೆ ಯೋಜನೆ: ಕುಸುಬೆ ಖರೀದಿ ಕೇಂದ್ರಗಳ ಪ್ರಾರಂಭ

**ಕೊಪ್ಪಳ:**ಕೊಪ್ಪಳಜಿಲ್ಲೆಯಲ್ಲಿಹಿಂಗಾರುಹಂಗಾಮಿನಲ್ಲಿ ಕುಸುಬೆ ಉತ್ಪನ್ನ ಖರೀದಿಸುವ ಸಂಬಂಧ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಕುಸುಬೆ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ ಎಂದು ಕೃಷಿ ಮಾರಾಟ ಇಲಾಖೆ ಸಹಾಯಕ ನಿರ್ದೇಶಕರು ಹಾಗೂ ಜಿಲ್ಲಾ ಟಾಸ್ಕ್ಫೋರ್ಸ್ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಸರ್ಕಾರದ ಆದೇಶದಂತೆ 2024–25ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಕುಸುಬೆ ಪ್ರತಿ ಕ್ವಿಂಟಾಲ್‌ಗೆ ರೂ. 5940 ಗಳಂತೆ ಎಕರೆಗೆ 4 ಕ್ವಿಂಟಾಲ್ ನಂತೆ ಒಬ್ಬ ರೈತರಿಂದ ಗರಿಷ್ಠ 20 ಕ್ವಿಂಟಲ್ ರಂತೆ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಮಾರ್ಗಸೂಚಿಗಳನ್ವಯ ಕೊಪ್ಪಳ ಜಿಲ್ಲೆಯ ರೈತರಿಂದ ಖರೀದಿಸುವ ಕುರಿತು ಇತ್ತೀಚೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಟಾಸ್ಕ್ಫೋರ್ಸ್ ಸಮಿತಿಯ ಸಭೆ ಜರುಗಿಸಿ, ಕೊಪ್ಪಳ ತಾಲ್ಲೂಕಿನ ಅಳವಂಡಿ, ಹಾಗೂ ಯಲಬುರ್ಗಾ ತಾಲೂಕಿನ ಬೇವೂರಿನಲ್ಲಿ ಕುಸುಬೆ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆ.

ನೋಡಲ್ ಅಧಿಕಾರಿಗಳ ವಿವರ: ಕುಸುಬೆ ಖರೀದಿ ಕೇಂದ್ರ ಅಳವಂಡಿಗೆ ಕೊಪ್ಪಳ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ವಿ.ಬಸವರಾಜ ಮೊ.ಸಂ: 9448765143, ಕುಸುಬೆ ಖರೀದಿ ಕೇಂದ್ರ ಬೇವೂರಿಗೆ ಯಲಬುರ್ಗಾ(ಕೇಂದ್ರ ಕಚೇರಿ, ಕುಕನೂರು) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಗುರುಪ್ರಸಾದ್ ಗುಡಿ ಮೊ.ಸಂ: 9972054874, ಇವರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಪ್ರತಿ ಎಕರೆಗೆ ಗರಿಷ್ಠ 05 ಕ್ವಿಂಟಲ್‌ರಂತೆ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಲ್ ಕುಸುಬೆ ಉತ್ಪನ್ನವನ್ನು ಖರೀದಿಸಲಾಗುತ್ತದೆ. ಎಫ್.ಎ.ಕ್ಯೂ ಗುಣಮಟ್ಟದ ಕುಸುಬೆಯನ್ನು ಮಾತ್ರ ಖರೀದಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಕೊಪ್ಪಳದ ರಾಯಚೂರು ವಿಭಾಗೀಯ ಕಛೇರಿ ಎಣ್ಣೆ ಬೀಜ ಬೇಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ ಕೊಪ್ಪಳ ದೂ.ಸಂ: 9591812142, ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಬಿಜೆಪಿಯ ಅನಗತ್ಯ ಗಲಾಟೆಯಿಂದ ಸದನದ ಸಮಯ ಹಾಳು: ಸಲಾಂಬಳ್ಳಾರಿಕಾರ್ಯಕ್ರಮದಲ್ಲಿಶಾಸಕನಾರಾಭರತ್‌ರೆಡ್ಡಿಅಸಮಾಧಾನ

● ವಾರ್ತಾಲೋಕ ವಾರ್ತೆ



**ಬಳ್ಳಾರಿ, ಮಾ.26:** ಕೇವಲ 18 ಜನ ಅಷ್ಟೇ ಅಲ್ಲ, ಎಲ್ಲ ಬಿಜೆಪಿ ಶಾಸಕರನ್ನೂ ಅಮಾನತು ಮಾಡಬೇಕಿತ್ತು ಎಂದು ಶಾಸಕ ನಾರಾ ಭರತ್ ರೆಡ್ಡಿ, ಅಸಮಾಧಾನ ವ್ಯಕ್ತಪಡಿಸಿದರು.

ಮೊನ್ನೆ ಸದನದಲ್ಲಿ ಬಿಜೆಪಿಯ 18 ಶಾಸಕರನ್ನು ಅಮಾನತ್ತು ಮಾಡಿದ ಬಗ್ಗೆ ಬಳ್ಳಾರಿಯ 6ನೇ ವಾರ್ಡಿನಲ್ಲಿ ಬುಧವಾರ ಬೆಳಿಗ್ಗೆ ಸಲಾಂ ಬಳ್ಳಾರಿ ಅಭಿಯಾನಕ್ಕೆ ಚಾಲನೆ ನೀಡಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು, ಸ್ಪೀಕರ್ ಸ್ಥಾನದ ಬೆಲೆ ಬಿಜೆಪಿಗೆ ಗೊತ್ತಿಲ್ಲ. ಸದನ ನಡೆಯಬೇಕೆಂದರೆ ಹತ್ತಾರು ಕೋಟಿ ಜನರ ಹಣ ಖರ್ಚಾಗುತ್ತದೆ, ಸದನದಲ್ಲಿ ಜನರ ಸಮಸ್ಯೆ ಚರ್ಚಿಸುವ ಮೂಲಕ ಉತ್ತರದಾಯಿತ್ವ ನೀಡಬೇಕು, ಆದರೆ ಬಿಜೆಪಿಯವರು ಅನಗತ್ಯ ಗಲಾಟೆ ಮಾಡಿ ಜನರ ಸಮಯ ಹಾಳು ಮಾಡಿದರು ಎಂದು ಅಸಮಾಧಾನವನ್ನು ವ್ಯಕ್ತಪಡಿಸಿದರು.

ನಮ್ಮ ಸಿಎಂ ಬಿಜೆಪಯವರ ಗಲಾಟೆಗೆ ಹೆದರಲ್ಲ,ಅವರುಜನಸಾಮಾನ್ಯಹಂತದಿಂದ ಹತ್ತಾರು ಹೋರಾಟ ಮಾಡಿ ರಾಜಕೀಯಕ್ಕೆ ಬಂದು, ಎರಡು ಅವಧಿಗೆ ಸಿಎಂ ಆಗಿದ್ದಾರೆ, ಅಂತಹ ನಮ್ಮ ನಾಯಕನ ಮೇಲೇರಿ ಬಿಜೆಪಿ ಶಾಸಕರು ಬಂದಾಗ ಶಾಸಕರಾಗಿ ನಮ್ಮ ನಾಯಕರ ಪರ ನಿಲ್ಲಬೇಕಾಗುತ್ತದೆ ಎಂದು ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಮೊದಲ ಬಾರಿ ಶಾಸಕರಾದ ನಮ್ಮಂಥವರಿಗೆ ಸದನದಲ್ಲಿ ನಮ್ಮ ಕ್ಷೇತ್ರಗಳ ಸಮಸ್ಯೆ ಬಗ್ಗೆ ಮಾತನಾಡಬೇಕಿರುತ್ತದೆ, ಆದರೆ ಇವರು ಈ ತರ ಕೀಳುಮಟ್ಟದಲ್ಲಿ ಗದ್ದಲ ಮಾಡಿ ನಮ್ಮ ಸಮಯ ಹಾಳು ಮಾಡಿದರು ಎಂದು ಬೇಸರ ವ್ಯಕ್ತಪಡಿಸಿದ ಅವರು, ಆದರೆ ಇವರು ಚರ್ಚೆಗೆ ಬಿಡಲಿಲ್ಲ, ಬಿಜೆಪಿಯವರಿಗೆ ನಾಯಕತ್ವ ಇಲ್ಲ, ಸದನದಲ್ಲಿ ಮಾತನಾಡಲು ಇವರಿಗೆ ವಿಷಯ ಇಲ್ಲ, ನಮ್ಮ ಸಿಎಂ ಹಾಗೂ ಡಿಸಿಎಂ ಒಳ್ಳೆಯ ಕೆಲಸ ಮಾಡುತ್ತಿರುವುದು ಬಿಜೆಪಿಯವರಿಗೆ ಸಹಿಸಲ ಆಗುತ್ತಿಲ್ಲ ಎಂದರು.

ಲಕ್ಷಾಂತರ ಜನರಿಗೆ ಎಂಎಲ್ ಎ ಆಗೋಕೆ ಅವಕಾಶ ಸಿಗಲ್ಲ. ನಮ್ಮ ತಂದೆ ತಾಯಿ ಜನರ ಆಶೀರ್ವಾದದಿಂದ ನಮಗೆ ಸಿಕ್ಕಿದೆ, ಈಗಿನ ರಾಜಕಾರಣದ ಬಗ್ಗೆ ಯುವಕರಿಗೆ ಋಣಾತ್ಮಕ ಭಾವನೆ ಇದೆ, ಮೊನ್ನೆ ಬಿಜೆಪಿ ಅವರು ಸದನದಲ್ಲಿ ಮಾಡಿದ ಗಲಾಟೆ ನೋಡಿ ನನಗೂ ಹಾಗೆ ಅನ್ನಿಸಿತು ಎಂದರು.

ಇದಕ್ಕೂ ಮುನ್ನ ಮಾತನಾಡಿದ ಅವರು ಸ್ಥಳೀಯ ಜನರ ಸಮಸ್ಯೆಗಳನ್ನು ತಿಳಿದುಕೊಂಡು ಅವರ ಸಮಸ್ಯೆ ಬಗೆಹರಿಸುವ ಉದ್ದೇಶದಿಂದ ಸಲಾಂ ಬಳ್ಳಾರಿ ಅಭಿಯಾನ ಆರಂಭಿಸಲಾಗಿದೆ, ಚುನಾವಣೆಯ ಸಂದರ್ಭ ನಾನು ಮಾತು ಕೊಟ್ಟಂತೆ ನಾನೇ ಖುದ್ದಾಗಿ ಜನರ ಬಳಿಗೆ ತೆರಳಿ ಅವರ ಸಂಕಷ್ಟ ಅರಿಯುವ ಕೆಲಸ ಈ ಅಭಿಯಾನದ ಮೂಲಕ ಮಾಡಲಾಗುತ್ತದೆ ಎಂದರು.

ಹಳೆಯ ಕಾರ್ಕಲ್‌ತೋಟ ರಸ್ತೆಯ ಸೇತುವೆ ನಿರ್ಮಾಣ ಶೀಘ್ರ: ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ, ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡಗಳಿಗೆ ಭೇಟಿ ನೀಡಿ ಸಮಸ್ಯೆ ಪರಿಹರಿಸುವ ವಿನೂತನ ಕಾರ್ಯಕ್ರಮ "ಸಲಾಂ ಬಳ್ಳಾರಿ" ಅಭಿಯಾನಕ್ಕೆ ಬುಧವಾರ ಬೆಳಿಗ್ಗೆ ಚಾಲನೆ ನೀಡಲಾಯಿತು.

ವಾರ್ಡ್ ಸಂಖ್ಯೆ 6ರ ಕಾಂಗ್ರೆಸ್ ಮುಖಂಡ ರಘುರಾಮ್ ಅವರ ನಿವಾಸದಿಂದ ವಾರ್ಡಿನ ಪ್ರಮುಖ ಬಡಾವಣೆಗಳಲ್ಲಿ ಸಂಚರಿಸಿ ಜನರಿಂದ ನೇರವಾಗಿ ಅವರ ಸಮಸ್ಯೆಗಳನ್ನು ಆಲಿಸಲಾಯಿತು.

ಹಳೆಯ ಕಾರ್ಕಲ್‌ತೋಟ ರಸ್ತೆಗೆ ಸೇತುವೆ ನಿರ್ಮಿಸಿ ಸ್ಮಶಾನಕ್ಕೆ ತೆರಳಲು ಅನುಕೂಲ ಮಾಡಿ ಕೊಡುವಂತೆ ಸ್ಥಳೀಯರು ಮನವಿ ಮಾಡಿದರು. ಸ್ಥಳೀಯರ ಮನವಿಗೆ ಸ್ಪಂದಿಸಿದ ಶಾಸಕ ನಾರಾ ಭರತ್ ರೆಡ್ಡಿ, ಶೀಘ್ರ ಸೇತುವೆ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದರು.

ಈಸಂದರ್ಭಮಹಾನಗರಪಾಲಿಕೆಯವಿವಿಧ ವಿಭಾಗಗಳ ಅಧಿಕಾರಿಗಳು ಸೇರಿದಂತೆ, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದು, ಜನರ ಸಮಸ್ಯೆಗಳನ್ನು ಪಟ್ಟಿ ಮಾಡಿಕೊಂಡರು. ಕೆಲವು ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸಲಾಯಿತು.

ಕಾಂಗ್ರೆಸ್ ಮುಖಂಡ ಎಂ.ವಿವೇಕ್, ಎಂ.ಸುಬ್ಬರಾಯುಡು, ಹೊನ್ನಪ್ಪ, ಬಿಆರೆಲ್ ಸೀನಾ, ಪಾಲಿಕೆಯ ಸದಸ್ಯರಾದ ವಿ.ಕುಬೇರ, ಎಂ.ಪ್ರಭಂಜನಕುಮಾರ್ ಮೊದಲಾದವರು ಹಾಜರಿದ್ದರು.

**ವರದಿ ಎಜಿ ರೆಡ್ಡಿ**

# ಅಂಜುಮಾ, ಜಿಲಾನ್ ಇವರ ವತಿಯಿಂದ ಬಡಕುಟುಂಬಗಳಿಗೆ ರಂಜಾನ್ ಪ್ರಯುಕ್ತ ದಿನಸಿ ಕಿಟ್ ವಿತರಣೆ









● ವಾರ್ತಾಲೋಕ ವಾರ್ತೆ

**ಹೊಸಪೇಟೆ :ಮಾರ್ಚ್ 26 :** ವಿಜಯನಗರ ಹೊಸಪೇಟೆ ತಾಲೂಕಿನ ಹನುಮನಹಳ್ಳಿಯಲ್ಲಿ ಅಂಜುಮಾ ಹಾಗೂ ಪತಿಯವರು ಜಿಲಾನ್ ವತಿಯಿಂದ ಮಂಗಳವಾರದಂದು ರಂಜಾನ್ ಹಬ್ಬದ ಪ್ರಯುಕ್ತ ಉಚಿತ ಆಹಾರ ಮತ್ತು ಬಟ್ಟೆ ಕಿಟ್ ವಿತರಿಸಲಾಯಿತು ಗ್ರಾಮೀಣ ಪ್ರದೇಶದಲ್ಲಿ ಇರುವ ಬಡವರಿಗೆ,ವಿಕಲಚೇತನರಿಗೆ, ವೃದ್ಧರಿಗೆ ಆಹಾರ ಧಾನ್ಯವನ್ನು ಮತ್ತು ಸೀರೆಗಳನ್ನು ಉಡುಗೊರೆ ಕಿಟ್ ವಿತರಣೆ ಕೊಟ್ಟು ಶುಭಾಶಯಗಳನ್ನು ವ್ಯಕ್ತಪಡಿಸಿದರು ಈ ಸಂದರ್ಭದಲ್ಲಿ ಓಂ ಶ್ರೀ ಸಿಂಧು ಸೃಷ್ಟಿ ಸೇವಾ ಟ್ರಸ್ಟ್ ನಾ ಅಧ್ಯಕ್ಷರಾದ ಪಿ ಸಿ ಶಾಂತ ಅವರು ಮಾತನಾಡಿ ಎಲ್ಲಾ ದಾನಿಗಳು ನಗರದಲ್ಲಿ ಇನ್ನೂ ಇತರೆ ಸಂಸ್ಥೆಗಳಿಗೆ ಹೊಗಿ ದಾನ ಧರ್ಮ ಮಾಡುತ್ತಾರೆ ಆದರೆ ಗ್ರಾಮಿಣ ಭಾಗದಲ್ಲಿ ವಿಕಲಚೇತನರು , ಬಡವರು, ವೃದ್ಧರಿಗೆ ಯಾರು ಸಹಾಯ ಮಾಡಲು ಮುಂದೆ ಬರುವುದಿಲ್ಲ ಇಲ್ಲಿಯೂ ಜನರು ಕಷ್ಟ ಪಟ್ಟು ಜೀವನ ನಡೆಸುತ್ತಿದಾರೆ ನಮ್ಮ ಟ್ರಸ್ಟ್ ನಾ ಸದಸ್ಯರಾದ ಅಂಜುಮಾ ಮತ್ತು ಅವರು ಪತಿಯವರಾದ ಜಿಲಾನ್ ಅವರಿಗೆ ಧನ್ಯವಾದ ಹೇಳಿ ಅವರನ್ನು ಸನ್ಮಾನಿಸಿರದು ಈ ಸಂದರ್ಭದಲ್ಲಿ ಓಂ ಶ್ರೀ ಸಿಂಧು ಸೃಷ್ಟಿ ಸೇವಾ ಟ್ರಸ್ಟ್ ನಾ ಅಧ್ಯಕ್ಷರಾದ ಪಿ ಸಿ ಶಾಂತ ಸದಸ್ಯರಾದ ಸಾವಿತ್ರಿ,ಸುಲ್ತಾನ್ ಉಪಸ್ಥಿತರಿದ್ದರು.

**ವರದಿ ಅಂಬರೀಶ್ ನಾಯಕ್**

# ಕಳ್ಳ ಹೊಕ್ಕ ಮನೆ ಉಳಿಯಬಹುದು ಕೊಳ್ಳಿ ಹೊಕ್ಕ ಮನೆ ಉಳಿಯಲಾರದು: ಶರಣಬಸಪ್ಪ ದಾನಕ್ಕೈ

● ವಾರ್ತಾಲೋಕ ವಾರ್ತೆ





**ಕುಕನೂರು : ಮಾರ್ಚ್ 26 :** ಕಳ್ಳ ಹೊಕ್ಕ ಮನೆ ಉಳಿಯಬಹುದು ಆದರೆ ಕೋಳ್ಳಿ ಹೋಕ್ಕ ಮನೆ ಉಳಿಯಲಾರದು ಸರಾಯಿ ಮದ್ಯ ಇದು ಕೋಳ್ಳಿ ಇದ್ದಂತೆ ಆದ್ದರಿಂದ ಮದ್ಯಪಾನ ಪ್ರೀಯರು ಇದರಿಂದ ದೂರವಿರಬೇಕು ಎಂದು ಅಖಿಲ ಕರ್ನಾಟಕ ಕೊಪ್ಪಳ ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯ ಶರಣಬಸಪ್ಪದಾನಕ್ಕೈ ಅವರು ದೀಪ ಬೆಳಗಿಸಿ ಮಾತನಾಡಿದರು. ದುಷ್ಟಚಟಗಳಿಂದ ದೂರವಿದ್ದಾಗ ನೆಮ್ಮದಿ ಕಾಣುವದಕ್ಕೆ ಸಾದ್ಯ ಎಂದು ಪಿಡಿಓ ವೀರನಗೌಡ ಚನ್ನನಗೌಡ್ರ ಅವರು ಮೈಲಾರಲಿಂಗೇಶ್ವರ ದೇವಸ್ಥಾನ ತಳಕಲ್ಲ ಗ್ರಾಮದಲ್ಲಿ ನವಜೀವನೋತ್ಸವ ಕಾರ್ಯಕ್ರಮದಲ್ಲಿ ನವಜೀವನ ಸಮಿತಿಯವರಿಗೆ ಸಲಹೆ ನೀಡಿದರು. ಮದ್ಯವ್ಯಸನಿಗಳು ಮೋಜು ಮಸ್ತಿಗಾಗಿ ಕುಡಿದು ನಂತರ ಚಟಕ್ಕೆ ದಾಸರಾಗಿ ಚಟ್ಟ ಕಟ್ಟಿ ಅವರ ಬದುಕು ಕಗ್ಗತ್ತಲಾಗಿ ಅವರ ಕುಟುಂಬ ಬೀದಿಪಾಲಾಗಿ ಹೋಗುತ್ತದೆ ಆದ್ದರಿಂದ ಜಾಗೃತಿವಹಿಸಬೇಕು ಎಂದು ಜನಜಾಗೃತಿ ಸಮಿತಿ ಸದಸ್ಯ ವೀರಣ್ಣ ನಿಂಗೋಜಿ ಅವರು ಮಾತನಾಡಿದರು. ಕುಟುಂಬದಲ್ಲಿ ಮದ್ಯಮಾರಟ ಮಾಡುವ ಸಮಯದಲ್ಲಿ ವಿದ್ಯಾವಂತ ಮಹಿಳೆಯರು ಸಿಲುಕಿ ಕೋರ್ಟ ಕಛೇರಿ ಅಲೆದಾಡುವ ಪ್ರಸಂಗ ಜರುಗಿವೆ ಇದರಿಂದ ಹೊರಬರಲಾರದೆ ಜೀವನದಲ್ಲಿ ಜಿಗುಪ್ಸೆಹೊಂದಿ ತೊಂದರೆ ಅನುಭವಿಸುತ್ತದ್ದಾರೆ ಆದ್ದರಿಂದ ಜಾಗೃತರಾಬೇಕು ಎಂದು ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯೆ ಸಾವಿತ್ರಿ ಗೋಲ್ಲರ ಅವರು ಮಾತನಾಡಿದರು.

ಜೀವನದ ಬದುಕಿನಲ್ಲಿ ಬದಲಾವಣೆ ಪರ್ವ ಜರುಗಿದಾಗ ಹೊಸ ಬದುಕು ನಿರ್ಮಿಸಲು ಸಾದ್ಯ ಎಂದು ಜಿಲ್ಲಾ ಜನಜಾಗೃತಿ ಸಮತಿ ಸದಸ್ಯ ಕರಬಸಯ್ಯ ಬಿನ್ನಾಳ ಅವರು ಮಾತನಾಡಿದರು.ತಳಕಲ್ಲ ನವಜೀವನ ಸಮತಿ ಅಧ್ಯಕ್ಷ ಷಣ್ಮುಖಯ್ಯ ಅವರು ಅದ್ಯಕ್ಷತೆ ವಹಿಸಿ ಮಾತನಾಡಿ ನಮಗೆಲ್ಲರಿಗೂ ಈ ಯೋಜನೆಯಲ್ಲಿ ಗೌರವ ಸ್ಥಾನ ಸಿಗುವದಕ್ಕೆ ಸಾದ್ಯವಾಗಿತು ಎಂದು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.. ಈ ವೇಳೆ ಜಿಲ್ಲಾ ಪ್ರಾದೇಶಿಕ ನಿರ್ದೇಶಕ ಪ್ರಕಾಶ್ ರಾವ್ , ಪ್ರಾದೇಶಿಕ ಜನಜಾಗೃತಿ ಯೋಜನಾಧಿಕಾರಿ ನಾಗೇಶ್ ವಾಯ್ ಎ , ಯಲಬುರ್ಗಾ ಯೋಜನಾದಿಕಾರಿ ಸತೀಶ ಜಿ, ಮುಖಂಡರಾದ ಲಿಂಬನಗೌಡ ಪೋಲಿಸ್ ಪಾಟೀಲ, ಮೇಲ್ವಿಚಾರಕ ಶಿವಪ್ಪ ಪೂಜಾರ, ಸೇವಾಪ್ರತಿನಿಧಿಗಳಾದ ಸುಮಂಗಲಾ,ನೀಲಮ್ಮ,ಸುನಂದಾ ಹಾಗು ಉಡಚಮ್ಮದೇವಿ ನವ ಜೀವನ ಸಮಿತಿ ತಳಕಲ್ಲಸಮಿತಿಯಸರ್ವಪದಾಧಿಕಾರಿಗಳು, ನವಜೀವನ ಪೋಷಕರು ಭಾಗವಹಿಸಿದ್ದರು.

**ವರದಿ ಮಂಗಳೇಶ ಮೆತಗಲ್**

VARTHA LOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com